ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:26-09-2020ರ ನಡವಳಿಗಳು

ವಿಷಯದ ಸಂಖ್ಯೆ: 01(100)/2018-19

ಪ್ರಸ್ತಾವನೆ:-

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ಸರ್ಕಾರವು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976 ಪ್ರಕರಣ 103ಕ್ಕೆ ತಿದ್ದುಪಡಿ ತರಲಾಗಿದ್ದು, ಸದರಿ ತಿದ್ದುಪಡಿಯಂತೆ ಹೊಸದಾಗಿ ಪ್ರಕರಣ 103ಸಿ ಎಂದು ಸೇರಿಸಿ, ಪ್ರಕರಣ 103 ಅಥವಾ 108ಎ ಅಡಿಯಲ್ಲಿ ಆಸ್ತಿ ತೆರಿಗೆಯ ಮೇಲೆ **ಶೇಕಡ 2%ರಂತೆ ನಗರ ಭೂ ಸಾರಿಗೆ ಉಪಕರವನ್ನು ಸಂಗ್ರಹಿ**ಸಲು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ತಿದ್ದುಪಡಿ ಹಿನ್ನಲೆಯಲ್ಲಿ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ನಗರ ಸಾರಿಗೆ ನಿಧಿ) ನಿಯಮಗಳು 2013 ಎಂದು ಹೊಸದಾಗಿ ನಿಯಮಗಳನ್ನು ರಚಿಸಲಾಗಿದೆ. ಸದರಿ ನಿಯಮಾವಳಿಯಂತೆ ನಗರ ಭೂ ಸಾರಿಗೆ ಉಪಕರವನ್ನು ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಎಂದು ಉಲ್ಲೇಖಿಸಿದೆ.

ನಗರ ಪಾಲಿಕೆಯು ಆಸ್ತಿ ತೆರಿಗೆ ಮೇಲೆ ಶೇಕಡ 2ರಷ್ಟು ನಗರ ಭೂ ಸಾರಿಗೆ ಉಪಕರವನ್ನು ವಿಧಿಸತಕ್ಕದ್ದು, ಸದರಿ ಉಪಕರವನ್ನು ಪ್ರಸ್ತುತ ಸಾಲಿನಿಂದಲೇ ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿದೆ.ಮುಂದುವರೆದಂತೆ ಪ್ರಸಕ್ತ ಸಾಲಿನಲ್ಲಿ ಈಗಾಗಲೇ ತೆರಿಗೆದಾರರು ಆಸ್ತಿ ತೆರಿಗೆಯನ್ನು ಪಾವತಿಸಿದಲ್ಲಿ ಅಂತಹ ಸ್ವತ್ತಿನ ಮಾಲೀಕರುಗಳಿಗೆ ಪೂರಕ ಬೇಡಿಕೆಯನ್ನು ನೀಡಿ ಸದರಿ ಉಪಕರವನ್ನು ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿದೆ.ಈ ಸಂಬಂಧ ನಗರ ಪಾಲಿಕೆಯು ಪ್ರತ್ಯೇಕ ವಹಿಗಳನ್ನು ನಿರ್ವಹಿಸತಕ್ಕದ್ದು.ನಗರ ಪಾಲಿಕೆಯು ಈ ರೀತಿ ವಿಧಿಸಿ, ಸಂಗ್ರಹಿಸಲಾದ ಉಪಕರದ ತ್ರೈಮಾಸಿಕ ಃ ಮಾಸಿಕ ವರದಿಯನ್ನು ಪ್ರತಿಯೊಂದು ಹಣಕಾಸು ವರ್ಷದಲ್ಲಿ ನಿರ್ದೇಶಕರು, ನಗರ ಭೂ ಸಾರಿಗೆ ಇಲಾಖೆಗೆ ಕಳುಹಿಸಿಕೊಡಲು ಸೂಚಿಸಲಾಗಿದೆ.

ಮೇಲಿನ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಸರ್ಕಾರದ ಆದೇಶವನ್ನು ದಾಖಲೆಗೆ ಮತ್ತು ಅನುಮೋದನೆಗಾಗಿ ಟಿಪ್ಪಣಿಯನ್ನು ಮಂಡಿಸಲಾಗಿದ್ದು ದಿನಾಂಕ: 23-12-2013ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:ತೆಆಸ್ಥಾಸ:46:2013-14ರಲ್ಲಿ ದಿನಾಂಕ:16-11-2013ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಲಾಗಿದೆ ಹಾಗೂ ದಿನಾಂಕ:28-05-2014ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:03(142)2013-14ರಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ.

> "2008-09ರ ನಂತರ ನಗರ ಪಾಲಿಕೆಯು ಆಸ್ತಿ ತೆರಿಗೆಯನ್ನು ಇಲ್ಲಿಯವರೆವಿಗೂ ತೆರಿಗೆಯನ್ನು ಪರಿಷ್ಕರಣೆ ಮಾಡಿರುವುದಿಲ್ಲ. ಸರ್ಕಾರದ ಆದೇಶದಂತೆ ಶೇಕಡ 2ರಷ್ಟು ನಗರ ಭೂ ಸಾರಿಗೆ ಉಪಕರವನ್ನು ವಿಧಿಸಿ, ಸದರಿ ಮೊತ್ತವನ್ನು ನಗರ ಭೂ-ಸಾರಿಗೆ ಇಲಾಖೆಗೆ ಪಾವತಿಸುವುದೆಂಬ ಆದೇಶವಿದ್ದು, ನಗರದ ಆಸ್ತಿ ತೆರಿಗೆದಾರರಿಗೆ ಹೆಚ್ಚಿನ ಹೊರೆಯಾಗುವ ದೃಷ್ಟಿಯಿಂದ ಸದರಿ ಸರ್ಕಾರದ ಆದೇಶವನ್ನು ಹಿಂಪಡೆಯುವ ಬಗ್ಗೆ ಸರ್ಕಾರವನ್ನು ಕೋರುವುದೆಂದು ಸಭೆಯು ತೀರ್ಮಾನಿಸಲಾಗಿದೆ."

ಮೇಲ್ಕಂಡ ದಿನಾಂಕ: 28-05-2014ರ ನಿರ್ಣಯಕ್ಕೆ ಸರ್ಕಾರದ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಈ ಸಂಬಂಧ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆರವರ ದಿನಾಂಕ:07-08-2014ರ ಪತ್ರದಲ್ಲಿ ಸದರಿ ಕೋರಿಕೆಯನ್ನು ಪರಿಗಣಿಸಲು ಬರುವುದಿಲ್ಲವಾದ್ದರಿಂದ ನಗರ ಭೂ ಸಾರಿಗೆ ನಿಧಿಯನ್ನು ಸಂಗ್ರಹಿಸುವ ಕುರಿತಂತೆ ಕೆ.ಎಂ.ಸಿ. ಕಾಯ್ದೆ 1976ಕ್ಕೆ ಮಾಡಲಾದ ತಿದ್ದುಪಡಿ ಹಾಗೂ ಈ ಕುರಿತು ರೂಪಿಸಲಾದ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ನಗರ ಸಾರಿಗೆ ನಿಧಿ) ನಿಯಮಗಳು, 2013ರ ಅನುಸಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಸ್ವತ್ತುಗಳ ಆಸ್ತಿ ತೆರಿಗೆ ಮೇಲೆ ಶೇಕಡ 2ರಷ್ಟು ನಗರ ಭೂ ಸಾರಿಗೆ ಉಪಕರವನ್ನು ವಿಧಿಸಿ ಸಂಗ್ರಹಿಸುವ ಕುರಿತು ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಮುಂದುವರೆದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಮೇಲೆ ಶೇ.2ರಷ್ಟು ನಗರ ಭೂ ಸಾರಿಗೆ ಉಪಕರವನ್ನು ಸಂಗ್ರಹಿಸದೇ ರಾಜಸ್ವ ನಷ್ಟ ಉಂಟಾಗಿರುತ್ತದೆಂದು Office of the Accountant Generalರವರಿಂದ ಹಲವಾರು ಬಾರಿ ಆಡಿಟ್ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುತ್ತಿದೆ. ಆದುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ವತ್ತುಗಳ **ಆಸ್ತಿ ತೆರಿಗೆ ಮೇಲೆ ಶೇಕಡ 2%ರಷ್ಟು ನಗರ ಭೂ ಸಾರಿಗೆ ಉಪಕರವನ್ನು ವಿಧಿಸಿ ಸಂಗ್ರಹಿಸುವ** ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:28-06-2018ರ** ಟಿಪ್ಪಣಿ.

ತೀರ್ಮಾನ: ಆಯುಕ್ತರ ದಿನಾಂಕ: 28/06/2018ರ ಟಿಪ್ಪಣಿ ಅನುಮೋದಿಸಿದೆ.

26/9/2020.
(ಗೌರವ್ ಗುಪ್ತ)
ಆಡಳಿತಗಾರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:26/09/2020ರ ನಡವಳಿಗಳು

ವಿಷಯದ ಸಂಖ್ಯೆ: 02(139)/2018-19

ಪ್ರಸ್ತಾವನೆ:-

ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ 2018-19ರ ಆಯವ್ಯಯದ ಬಗ್ಗೆ ನಡೆದ ಪಾಲಿಕೆ ಕೌನ್ಸಿಲ್ ಸಭೆಯ ಚರ್ಚೆಯಲ್ಲಿ ನಮ್ಮ ದೇಶದ ಇತರ ನಗರಗಳಲ್ಲಿ ಓ.ಎಫ್.ಸಿ ಅಳವಡಿಕೆ ಶುಲ್ಕಗಳು ಪಾಲಿಕೆಯು ನಿಗಧಿಪಡಿಸಿರುವ ಶುಲ್ಕಗಳಿಗಿಂತ ಹೆಚ್ಚಾಗಿರುವ ಬಗ್ಗೆ ಚರ್ಚಿಸಲಾಗಿದ್ದು, ಓ.ಎಫ್.ಸಿ ಅಳವಡಿಕೆ ಮತ್ತು ಟವರ್ ಅಳವಡಿಕೆಗೆ ಪಾಲಿಕೆಯಲ್ಲಿ ನಿಗಧಿಗೊಳಿಸಿರುವ ಶುಲ್ಕದ ದರವನ್ನು ಪರಾಮರ್ಶಿಸಿ ಪುನರ್ ನಿಗದಿಗೊಳಿಸುವ ಕುರಿತು ಪರಿಶೀಲಿಸುವಂತೆ ತಿಳಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಅಂತರ್ಜಾಲದಲ್ಲಿ ಶೋಧಿಸಲಾಗಿ ಹಲವಾರು ನಗರಗಳ ಓ.ಎಫ್.ಸಿ ಅಳವಡಿಕೆ ಶುಲ್ಕ/ನೆಲಬಾಡಿಗೆ ವಿವರಗಳು ಲಭ್ಯವಿರುತ್ತದೆ. ಸದರಿ ಲಭ್ಯ ವಿವರಗಳ ಪ್ರಕಾರ ದೇಶದ ಹಲವಾರು ನಗರಗಳು ಕೇಂದ್ರ ಸರ್ಕಾರದ ದೂರ ಸಂಪರ್ಕ ಇಲಾಖೆಯ ಆದೇಶದನ್ವಯ ಶುಲ್ಕ ವಸೂಲಾತಿ ಮಾಡುತ್ತಿರುವುದು ಕಂಡುಬಂದಿದೆ.ದೇಶದ ಇತರ ನಗರಗಳಲ್ಲಿ ಓ.ಎಫ್.ಸಿ ಅಳವಡಿಕೆ ಶುಲ್ಕ ಮತ್ತು ನೆಲಬಾಡಿಗೆ ಬಗ್ಗೆ ಅಂತರ್ಜಾಲದಿಂದ ಸಂಗ್ರಹಿಸಿರುವ ವಿವರಗಳು ಈ ಕೆಳಗಿನಂತಿವೆ.

ಕ್ರ.ಸಂ	ನಗರ	ಅಳವಡಿಕೆ ಶುಲ್ಕ ರೂ.ಪ್ರತಿ ಮೀ	ನೆಲಬಾಡಿಗೆ ರೂ.ಪ್ರತಿ ಮೀ
1	ಮದುರೈ, ಸೇಲಂ, ಕೊಯಮತ್ತೂರು, ತಿರುಚಿನಾಪಳ್ಳಿ, ಮತ್ತು ತಿರುನಲ್ವೇಲಿ	ಇಲ್ಲ	6.3
2	ಚೆನ್ನೈ ಕಾರ್ಪೋರೇಷನ್	ಇಲ್ಲ	9.4
3	ಚಂಡೀಗಡ	ಇಲ್ಲ	10
4	ಹರಿಯಾಣ	30-100ರೂ (20 ವರ್ಷಗಳಿಗೆ)	
5	ಮುಂಬೈ (ರೂ.60 ಲಕ್ಷ ಪ್ರತಿ ಕಿ.ಮೀ ಪ್ರಮಾಣಕ ವೆಚ್ಚದಂತೆ Normative cost)	ರೂ. 1.8 ಲಕ್ಷ ಅಳವಡಿಕೆ ಶುಲ್ಕ ಮತ್ತು ರೂ. 3 ಲಕ್ಷದ ಕ್ಯಾಶ್‌ಲೆಸ್ ಇಕ್ವಿಟಿ ಶೇರ್‌ಗಳು- ಮಹಾರಾಷ್ಟ್ರ ಸರ್ಕಾರಕ್ಕೆ ರೂ.1.8 ಲಕ್ಷ ಅಳವಡಿಕೆ ಶುಲ್ಕ ಮುಂಬೈ ಕಾರ್ಪೋರೇಷನ್‌ಗೆ ರೂ.7500 ಪ್ರತಿ ಮೀಟರ್‌ರಸ್ತೆ ಪುನರ್ ನಿರ್ಮಾಣ ಶುಲ್ಕ ಮತ್ತು 2 ಎಂ.ಬಿ.ಪಿ.ಎಸ್ ಬ್ರಾಡ್‌ಬ್ಯಾಂಡ್ ಸಂಪರ್ಕ ಉಚಿತವಾಗಿ ಸರ್ಕಾರ ಸೂಚಿಸುವ ಸರ್ಕಾರಿ ಸಂಸ್ಥೆಗಳಿಗೆ.	
6	ಹೈದರಾಬಾದ್	ರೂ.200 ಪ್ರತಿ ಮೀಟರ್	
7	ದೆಹಲಿ	ರೂ.103.65 ಪ್ರತಿ ಮೀಟರ್ ನಿಂದ ಅರೂ339.59 ಪ್ರತಿ ಮೀಟರ್	
8	ಕೋಲ್ಕತ್ತ	ರೂ.165 ಪ್ರತಿ ಮೀಟರ್ ಪರಿಶೀಲನಾ ಶುಲ್ಕ ಮತ್ತು ರೂ.192 ಪ್ರತಿ ಮೀಟರ್ ಮೇಲ್ವಿಚಾರಣಾ ಶುಲ್ಕ	

ಪ್ರಸ್ತುತ ಪಾಲಿಕೆಯಲ್ಲಿ ಟೆಲಿಕಾಂ ಮತ್ತು ನಾನ್-ಟೆಲಿಕಾಂ ಸಂಸ್ಥೆಗಳಿಗೆ ಹೆಚ್.ಡಿ.ಡಿ ಮಾದರಿಯಲ್ಲಿ ಓ.ಎಫ್.ಸಿ ಡಕ್ಟ್ ಅಳವಡಿಕೆಗೆ ಒಂದು ಸಲಕ್ಕೆ ಮೊದಲ ಮೂರು ಡಕ್ಟ್‌ಗಳಿಗೆ ರೂ.600/- ಪ್ರತಿ ಮೀಟರ್ ಮತ್ತುಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ರೂ.200/- ಪ್ರತಿ ಮೀಟರ್ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಟೆಂಡರ್ ಶ್ಯೂರ್ ರಸ್ತೆಗಳಲ್ಲಿ ಎಲ್ಲಾ ಸಂಸ್ಥೆಗಳಿಗೆ ರೂ.1500/- ಪ್ರತಿ ಮೀಟರ್ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಆದರೆ ಪಾಲಿಕೆ ವ್ಯಾಪ್ತಿಯಲ್ಲಿ ಸದರಿ ಶುಲ್ಕ ಅಳವಡಿಕೆ ಶುಲ್ಕವಾಗಿರುತ್ತದೆ ಮತ್ತು ನೆಲಬಾಡಿಗೆಯನ್ನು ವಸೂಲಿ ಮಾಡಲಾಗುತ್ತಿಲ್ಲ.ಕರ್ನಾಟಕ ಸರ್ಕಾರದKarnataka Municipal Corporation (Regulation of Cable laying) Rules,2015ರ ಕರಡು ಪ್ರಸ್ತಾವನೆ ಈಗಾಗಲೇ ಹೊರಡಿಸಲಾಗಿದ್ದು, ಇದರಂತೆ ಪ್ರತಿ ಮೀಟರಿಗೆ ರೂ.80/- ಮತ್ತು ಪ್ರತಿ ಗುಂಡಿಗೆ ರೂ.750 ಶುಲ್ಕ ನಿಗದಿಪಡಿಸಲಾಗಿದೆ. ಅಲ್ಲದೇ ಪ್ರತಿ ವರ್ಷಕ್ಕೆ ಪ್ರತಿ ಕಿ.ಮೀ.ಗೆ ರೂ.800 ರಂತೆ ವಾರ್ಷಿಕ ನೆಲಬಾಡಿಗೆ ನಿಗದಿಪಡಿಸಲಾಗಿಬೆ. ಸದರಿ ಮೊತ್ತಕ್ಕಿಂತ ಪಾಲಿಕೆಯಲ್ಲಿ ಪ್ರಸ್ತುತ ಪಡೆಯುತ್ತಿರುವ ಶುಲ್ಕ ಹೆಚ್ಚಾಗಿರುವುದು ಸ್ವಯಂ ವೇದ್ಯವಾಗಿದೆ.ಅಲ್ಲದೇ ದೇಶದ ಇತರ ನಗರಗಳಿಗೆ ಹೋಲಿಸಿದಾಗ ಸಹ ಮೊತ್ತ ಪಾಲಿಕೆಯಲ್ಲಿ ಪ್ರಸ್ತುತ ಪಡೆಯುತ್ತಿರುವ ಶುಲ್ಕ ಹೆಚ್ಚಾಗಿರುತ್ತದೆ.

ಈ ಹಿನ್ನಲೆಯಲ್ಲಿ ಶುಲ್ಕವನ್ನು ಅಪಾರವಾಗಿ ಹೆಚ್ಚುವರಿ ಮಾಡುವುದ ಪ್ರಸ್ತುತ ಸಂದರ್ಭದಲ್ಲಿ ಸೂಕ್ತವೆನಿಸದಿದ್ದರೂ ಪಾಲಿಕೆಯಲ್ಲಿ ಟೆಲಿಕಾಂ ಮತ್ತು ನಾನ್-ಟೆಲಿಕಾಂ ಸಂಸ್ಥೆಗಳಿಗೆ ಹೆಚ್ಚು ಶುಲ್ಕ ವಿಧಿಸಲಾಗುತ್ತಿದ್ದು, ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ಕಡಿಮೆ ಶುಲ್ಕ ವಿಧಿಸಲಾಗುತ್ತಿದೆ.ಸದರಿ ತಾರತಮ್ಯವನ್ನು ಕಡಿಮೆ ಮಾಡಿ ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ವಿಧಿಸುವ ಶುಲ್ಕವನ್ನು ರೂ.200 ರಿಂದ 600ಕ್ಕೆ ಏರಿಸುವ ಅವಕಾಶವಿದ್ದು ಈ ಬಗ್ಗೆ ಕ್ರಮಕೈಗೊಳ್ಳಬಹುದಾಗಿರುತ್ತದೆ.

ಮುಂದುವರೆದು ಟೆಲಿಕಾಂ ಟವರ್‌ಗಳ ಸ್ಥಾಪನೆ ಬಗ್ಗೆ ಸಹ ಪರಿಶೀಲಿಸಲಾಯಿತು.ಓ.ಎಫ್.ಸಿ ಜಾಲದ ಅವಿಭಾಜ್ಯ ಅಂಗವಾಗಿರುವ ಮೊಬೈಲ್ ಟವರ್/ಟೆಲಿಕಮ್ಯುನಿಕೇಷನ್ ಟವರ್‌ಗಳ ಸ್ಥಾಪನೆಯು ಕೆ.ಎಂ.ಸಿ ಕಾಯ್ದೆಯ ಪರಿವ್ಯಾಪ್ತಿಗೆ ಒಳಪಡುತ್ತಿದ್ದು, ಇಂತಹ ಟವರ್‌ಗಳ ಸ್ಥಾಪನೆಗೆ ಪಾಲಿಕೆಯ ಅನುಮತಿ ಅತ್ಯಗತ್ಯವಾಗಿರುತ್ತದೆ. ಆದರೂ ಸಹಿತ ಪಾಲಿಕೆಯ ಯಾವುದೇ ಅನುಮತಿ ಪಡೆಯದೇ ಬೆಂಗಳೂರು ನಗರಾದ್ಯಾಂತ ಟೆಲಿಕಮ್ಯುನಿಕೇಷನ್ ಟವರ್‌ಗಳನ್ನು ಹಲವಾರು ಸಂಸ್ಥೆಗಳು ಅಳವಡಿಸಿದ್ದು ಈ ಬಗ್ಗೆ ಸಾರ್ವಜನಿಕರಿಂದ ಮತ್ತು ಜನಪ್ರತಿನಿಧಿಗಳಿಂದ ಅಸಂಖ್ಯ ದೂರುಗಳು ಸ್ವೀಕಾರಗೊಂಡಿವೆ. ಕರ್ನಾಟಕ ಸರ್ಕಾರವು ಟೆಲಿಕಮ್ಯುನಿಕೇಷನ್ ಟವರ್‌ಗಳ ಸ್ಥಾಪನೆಯ ಬಗ್ಗೆ ನಿಯಮಾವಳಿಗಳನ್ನು ರೂಪಿಸುತ್ತಿದ್ದು ಕರಡು ನಿಯಮಾವಳಿKarnataka Installation of New Tele communication Infrastructure Tower Regulations 2015 ಯನ್ನು ಈಗಾಗಲೇ ರಾಜ್ಯಪತ್ರದಲ್ಲಿ ಪರಕಟಿಸಲಾಗಿದೆ. ಸದರಿ ಕರಡು ನಿಯಮಾವಳಿಗಳು ಟೆಲಿಕಮ್ಯುನಿಕೇಷನ್ ಟವರ್‌ಗಳನ್ನು ಸ್ಥಾಪಿಸಬೇಕಿರುವ ಸ್ಥಳಗಳ ಆಯ್ಕೆಯ ಬಗ್ಗೆ ನಿಯಮಗಳು ಮತ್ತು ನಿಗದಿತ ಶುಲ್ಕವನ್ನು ಹೊಂದಿರುತ್ತವೆ ಮತ್ತು ನಿಕಟ ಭವಿಷ್ಯದಲ್ಲಿ ಸದರಿ ನಿಯಮಾವಳಿಗಳು ಜಾರಿಗೆ ಬರುವ ನಿರೀಕ್ಷೆಯಿದೆ.

ಇವುಗಳ ಹಿನ್ನೆಲೆಯಲ್ಲಿ ದಿನಾಂಕ: 10-07-2017 ರಂದು ಓ.ಎಫ್.ಸಿ ಸಂಸ್ಥೆಯವರೊಂದಿಗೆ ನಡೆದ ಸಭೆಯಲ್ಲಿ ಸಭಾಧ್ಯಕ್ಷರಾದ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮಾನ್ಯ ಅಧ್ಯಕ್ಷರು ಹದಿನೈದು ದಿನಗಳೊಳಗಾಗಿ ಬೆಂಗಳೂರು ನಗರಾದ್ಯಂತ ಸ್ಥಾಪಿಸಿರುವ ಟೆಲಿಕಮ್ಯೂನಿಕೇಷನ್ ಟವರ್‌ಗಳ ವಿವರಗಳನ್ನು ಸ್ವಯಂಘೋಷಣೆ ಮೂಲಕ ಸಲ್ಲಿಸಲು ಓ.ಎಫ್.ಸಿ ಮತ್ತು ಟವರ್ ನಿರ್ಮಾಣ ಸಂಸ್ಥೆಗಳಿಗೆ ಸೂಚಿಸಿರುತ್ತಾರೆ. ಅಲ್ಲದೇ ಸ್ವಯಂಘೋಷಣೆ ಮಾಡಿಕೊಂಡ ಸಂಸ್ಥೆಗಳ ಟವರ್‌ಗಳು ಟೆಲಿಕಮ್ಯುನಿಕೇಷನ್ ಟವರ್‌ಗಳ ಸ್ಥಾಪನೆಯ ಬಗ್ಗೆ ಕರಡು ನಿಯಮಾವಳಿಯಲ್ಲಿ ಸೂಚಿಸಿರುವಂತೆ ಸ್ಥಾಪಿಸಲಾಗಿದ್ದಲ್ಲಿ ಕರಡು ನಿಯಮಾವಳಿಯಲ್ಲಿ ಸೂಚಿಸಿರುವ ರೂ.50,000/- ಪ್ರತಿಟವರ್ ಶುಲ್ಕ ಪಡೆದು ಕ್ರಮಬದ್ಧಗೊಳಿಸಲು ಸಹ ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸ್ವಯಂಘೋಷಣೆ ಮಾಡಿಕೊಂಡ ಸಂಸ್ಥೆಗಳ ಟವರ್‌ಗಳು ಟೆಲಿಕಮ್ಯುನಿಕೇಷನ್ ಟವರ್‌ಗಳ ಸ್ಥಾಪನೆಯ ಬಗ್ಗೆ ಕರಡು ನಿಯಮಾವಳಿಯಲ್ಲಿ ಸೂಚಿಸಿರುವಂತೆ ಸ್ಥಾಪಿಸಲಾಗಿದ್ದಲ್ಲಿ ಕರಡು ನಿಯಮಾವಳಿಯಲ್ಲಿ ಸೂಚಿಸಿರುವ ರೂ.50,000/- ಪ್ರತಿಟವರ್ ಶುಲ್ಕ ಪಡೆದು ಕ್ರಮಬದ್ಧಗೊಳಿಸಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಟಿಪ್ಪಣಿ

ಮಂಡಿಸಲಾಗಿದ್ದು ದಿನಾಂಕ: 07–08–2017 ರಂದು ವಿಷಯ ಸಂಖ್ಯೆತೆಆಸ್ಥಾಸ/60/2017–18 ರಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ದಿನಾಂಕ: 30–08–2017 ರಂದು ವಿಷಯ ಸಂಖ್ಯೆ 02(166)/2017–18 ರಂತೆ ಪಾಲಿಕೆ ಸಭೆಗಳು ಸದರಿ ಶುಲ್ಕವನ್ನು ಅನುಮೋದಿಸಿವೆ.

ಪಾಲಿಕೆಯ ವ್ಯಾಪ್ತಿಯಲ್ಲಿ ಈಗಾಗಲೇ ಸ್ವಯಂ ಘೋಷಣೆ ಮಾಡಿಕೊಂಡಿರುವ ಟವರ್‌ಗಳ ಸಂಖ್ಯೆ ಈ ಕೆಳಗಿನಂತಿದೆ.

ಕ್ರ. ಸಂ	ಸಂಸ್ಥೆ	ಸ್ವಯಂಘೋಷಣೆ ಮಾಡಿಕೊಂಡಿರುವ ಟವರ್‌ಗಳ ಸಂಖ್ಯೆ
1	ಅಮೇರಿಕನ್ ಟವರ್ ಕಂಪನಿ (ಎ.ಟಿ.ಸಿ)	1920
2	ಇಂಡಸ್ ಟವರ್ಸ್	2904
3	ಟವರ್ ವಿಷನ್	448
4	ರಿಲಯನ್ಸ್ ಜಿಯೋ ಇನ್ಫೋಕಾಮ್ ಲಿಮಿಟೆಡ್	873
5	ರಿಲಯನ್ಸ್ ಇನ್ಫ್ರಾ	621
	ಒಟ್ಟು	6766

ಪ್ರಸ್ತುತ ಪಾಲಿಕೆಯಲ್ಲಿ ಟವರ್‌ಗಳ ಅನುಮತಿ ಪ್ರಕ್ರಿಯೆಯನ್ನು ಜಿ.ಐ.ಎಸ್ ಆಧಾರಿತ ಅಂತರ್ಜಾಲ ವ್ಯವಸ್ಥೆಯ ಮೂಲಕ ಪಾರದರ್ಶಕವಾಗಿ ಮಾಡಲು ಅವಕಾಶ ಕಲ್ಪಸಲಾಗಿದ್ದು ಸದರಿ ವ್ಯವಸ್ಥೆಯನ್ನು ಶೀಘ್ರದಲ್ಲೇ ಜಾರಿಗೆ ತರಲಾಗುವುದು.ಒಂದುಟವರ್ ಸ್ಥಾಪನೆಗೆ ಅನುಮತಿ ನೀಡುವ ಪೂರ್ವದಲ್ಲಿ ಕರಡುKarnataka Installation of New Telecommunication Infrastructure Tower Regulations 2015ನಲ್ಲಿ ವಿಧಿಸಲಾಗಿರುವಂತೆ ಮಾಲೀಕತ್ವ ದಾಖಲೆ, ಸ್ಯಾಂಕ್ಷನ್‌ಡ್ ಪ್ಲಾನ್, ಒಕ್ಯುಪನ್ಸಿ ಸರ್ಟಿಫಿಕೇಟ್. ಲೀಸ್‌ಡೀಡ್, ಫೈರ್ ಎನ್.ಓ.ಸಿ ಇಂಡೆಮ್ನಿಟಿ ಬಾಂಡ್, ಫಾರೆಸ್ಟ್ ಎನ್.ಓ.ಸಿ ಮುಂತಾದ ಹಲವು ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕಿರುತ್ತದೆ. ಅಲ್ಲದೇ ಸದರಿ ಟವರ್ ಜಲಮೂಲಗಳಾದ ಕೆರೆ, ನಾಲೆಗಳಲ್ಲಿ ಸ್ಥಾಪನೆಯಾಗಿರದ ಬಗ್ಗೆ, ಸರೋವರಗಳಿಂದ ಕನಿಷ್ಠ 6 ಮೀ ದೂರದಲ್ಲಿರುವ ಬಗ್ಗೆ, ರೈಲ್ವೆ ಸ್ವತ್ತುಗಳಿಂದ ಕನಿಷ್ಠ 30 ಮೀ ದೂರದಲ್ಲಿರುವ ಬಗ್ಗೆ, ರಿಸರ್ವ್ ಫಾರೆಸ್ಟ್‌ನಲ್ಲಿ ಇರದ ಬಗ್ಗೆ, ಶಾಲೆ, ಕಾಲೇಜು, ಧಾರ್ಮಿಕ ಕೇಂದ್ರಗಳು ಮತ್ತು ರಕ್ಷಿತ ಸ್ಮಾರಕಗಳಿಂದ ಕನಿಷ್ಠ 100 ಮೀ ದೂರದಲ್ಲಿರುವ ಬಗ್ಗೆ ಅಲ್ಲದೇ ಟವರ್‌ಗಳಲ್ಲಿ ಸುರಕ್ಷತೆಗಾಗಿ ಸಲಕರಣೆಗಳು ಅಳವಡಿಸಲ್ಪಟ್ಟಿರುವ ಬಗ್ಗೆ ಮತ್ತು ಸೆಟ್–ಬ್ಯಾಕ್‌ಗಳನ್ನು ಬಿಟ್ಟಿರುವ ಬಗ್ಗೆ ಪರಿಶೀಲಿಸಿ ವರದಿ ಪಡೆದ ನಂತರವಷ್ಟೇ ನೀಡಬೇಕಿರುತ್ತದೆ. ಈ ಹಿನ್ನಲೆಯಲ್ಲಿ ವಿವರವಾದ ವ್ಯವಸ್ಥೆಯನ್ನು ಹೊಂದಿರುವ ಅಂತರ್ಜಾಲ ವ್ಯವಸ್ಥೆಯನ್ನು ಸಿದ್ದಪಡಿಸಲಾಗಿದ್ದು ಸದ್ಯದಲ್ಲೇ ಜಾರಿಗೆ ತರಲಾಗುವುದು.

ಪಾಲಿಕೆ ಸಭೆಯಲ್ಲಿ ಸೂಚಿಸಲಾದಂತೆ ಇತರ ನಗರಗಳಲ್ಲಿ ಟೆಲಿಕಾಂ ಟವರ್ ಅಳವಡಿಕೆ/ನೋಂದಣಿ ಶುಲ್ಕಗಳು ಮತ್ತು ವಾರ್ಷಿಕ ನವೀಕರಣ ಶುಲ್ಕ ಈ ಕೆಳಗಿನಂತಿವೆ.

ಕ್ರ. ಸಂ	ನಗರ	ಅಳವಡಿಕೆ ಶುಲ್ಕ/ನೋಂದಣಿ ಶುಲ್ಕ ರೂ.ಪ್ರತಿಟವರ್	ವಾರ್ಷಿಕ ನವೀಕರಣ ಶುಲ್ಕ ರೂ.ಪ್ರತಿಟವರ್
1	ಆಂಧ್ರಪ್ರದೇಶ (ಕಾರ್ಪೋರೇಶನ್‌ಗಳಲ್ಲಿ)	1,00,000/-	
2	ಬಿಹಾರ(ಕಾರ್ಪೋರೇಶನ್‌ಗಳಲ್ಲಿ)	50,000/-	15,000/-
3	ಹರ್ಯಾಣ	2,50,000/-	
4	ಗೋವಾ	25,000/-	
5	ಶಿಮ್ಲಾ, ಹಿಮಾಚಲ್ ಪ್ರದೇಶ	20,000/-	10,000/-
6	ಕೇರಳ	50,000/-	
7	ಮಧ್ಯಪ್ರದೇಶ (ಕಾರ್ಪೋರೇಷನ್‌ಗಳಲ್ಲಿ)	1,00,000/-	20,000/-
8	ಮುಂಬೈ	ಅಭಿವೃದ್ಧಿ ಶುಲ್ಕ-ಟವರ್ ಸ್ಥಾಪಿಸುವ ಸ್ವತ್ತಿನ ದರದ 1% ಮತ್ತು 50,000/- ಆಡಳಿತಾತ್ಮಕ ಶುಲ್ಕ	
9	ಪಂಜಾಬ್	50,000/- ಮೊದಲ ಬಳಕೆದಾರರಿಗೆ ಮತ್ತು ರೂ.25,000/- ಪ್ರತಿ ಹೆಚ್ಚುವರಿ ಬಳಕೆದಾರರಿಗೆ	
10	ಕೋಲ್ಕತ್ತ	ಅಧೀಕೃತ ಟವರ್‌ಗಳಿಗೆ ರೂ.2,00,000/- ಅನಧೀಕೃತ ಟವರ್ ಸಕ್ರಮಕ್ಕೆ ರೂ.3,00,000/-	

ಈ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಓ.ಎಫ್.ಸಿ ಅಳವಡಿಕೆ ಸಂದರ್ಭದಲ್ಲಿ ಮತ್ತುಟವರ್ ಸ್ಥಾಪನೆ ಕುರಿತಂತೆ ಕೆ.ಎಂ.ಸಿ ಕಾಯ್ದೆಯಅನ್ವಯ

1. ಪಾಲಿಕೆಯಲ್ಲಿ ಟೆಲಿಕಾಂ ಮತ್ತು ನಾನ್ ಟೆಲಿಕಾಂ ಸಂಸ್ಥೆಗಳಿಗೆ ಹೆಚ್.ಡಿ.ಡಿ ಮಾದರಿಯಲ್ಲಿ ಓ.ಎಫ್.ಸಿ ಡಕ್ಟ್ ಅಳವಡಿಕೆಗೆಒಂದು ಸಲಕ್ಕೆ ಮೊದಲ ಮೂರು ಡಕ್ಟ್‌ಗಳಿಗೆ ರೂ.600 ಶುಲ್ಕ ವಿಧಿಸಲಾಗುತ್ತಿದ್ದು ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ರೂ.200 ಶುಲ್ಕ ವಿಧಿಸಲಾಗುತ್ತಿದೆ. ಎಲ್ಲ ಸಂಸ್ಥೆಗಳೂ ಸಾಮ್ಯ ಮಾದರಿಯ ಓ.ಎಫ್.ಸಿ ಅಳವಡಿಸುವ ಹಿನ್ನಲೆಯಲ್ಲಿ ಸದರಿ ತಾರತಮ್ಯವನ್ನು ನಿವಾರಿಸುವ ನಿಟ್ಟಿನಲ್ಲಿ ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ವಿಧಿಸುವ ಶುಲ್ಕವನ್ನು ರೂ.200 ರಿಂದ ರೂ.600 ಕ್ಕೆ ಏರಿಸಲು, ಹೆಚ್ಚುವರಿ ಡಕ್ಟ್‌ಗಳಿಗೆ ಸಮಾನುಪಾತದಲ್ಲಿ ಶುಲ್ಕ ವಿಧಿಸಲು, ಅಲ್ಲದೇ ಸದರಿ ಮೊತ್ತದ 25% ಮೊತ್ತವನ್ನು ಭದ್ರತಾ ಠೇವಣಿಯಾಗಿ ಪಡೆದುಕೊಳ್ಳಲು ಮತ್ತು ಈವರೆಗೆ ಪಾಲಿಕೆಯು ಸದರಿ ಇಂಟರ್ನೆಟ್ ಸೇವಾ ಸಂಸ್ಥೆಗಳೊಡನೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ರದ್ದುಪಡಿಸಿ ನೂತನ ದರಗಳೊಡನೆ ಹೊಸ ಒಡಂಬಡಿಕೆ ಮಾಡಿಕೊಳ್ಳಲು ಮತ್ತು
2. ಟವರ್ ಸ್ಥಾಪನೆ ಬಗ್ಗೆ ಸ್ವಯಂಘೋಷಣೆ ಮಾಡಿಕೊಂಡ ಸಂಸ್ಥೆಗಳ ಟವರ್‌ಗಳು ಟೆಲಿಕಮ್ಯೂನಿಕೇಷನ್ ಟವರ್‌ಗಳ ಸ್ಥಾಪನೆಯ ಬಗ್ಗೆ ಕರಡು ನಿಯಮಾವಳಿಯಲ್ಲಿ ಸೂಚಿಸಿದಂತೆ ಸ್ಥಾಪಿಸಲಾಗಿದ್ದಲ್ಲಿ ಕರಡು ನಿಯಮಾವಳಿಯಲ್ಲಿ ಸೂಚಿಸಿರುವ ರೂ.2,50,000/- ಪ್ರತಿ ಟವರ್

ನೋಂದಣಿ ಶುಲ್ಕ ಮತ್ತು ವಾರ್ಷಿಕ ನವೀಕರಣ ಶುಲ್ಕ ರೂ.20,000/- ಪ್ರತಿಟವರ್‌ಗೆ ಪಡೆದು ಕ್ರಮಬದ್ಧಗೊಳಿಸಲು.

ಅನುಮೋದನೆಯನ್ನು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ: 12-07-2018ರ ಟಿಪ್ಪಣಿ. ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:12.07.2018ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡುಗಳೊಂದಿಗೆ ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:06-08-2018 ರ ನಿರ್ಣಯ

1. ಹೆಚ್.ಡಿ.ಡಿ. ಮಾದರಿಯಲ್ಲಿ ಓ.ಎಫ್.ಸಿ ಡಕ್ಟ್ ಅಳವಡಿಕೆಗೆ ಒಂದು ಸಲಕ್ಕೆ ಮೊದಲ ಮೂರು ಡಕ್ಟ್‌ಗಳಿಗೆ ವಿಧಿಸಲಾಗುತ್ತಿದ್ದ ರೂ.600/- ಶುಲ್ಕಗಳಿಗೆ ಬದಲಾಗಿ ರೂ.750/-ಕ್ಕೆ ಹೆಚ್ಚಿಸಿದೆ.
2. ಪ್ರತಿಟವರ್ ನೊಂದಣಿ ಶುಲ್ಕ ಮತ್ತು ವಾರ್ಷಿಕ ನವೀಕರಣ ಶುಲ್ಕ ರೂ.20,000/- ಗಳಿಗೆ ಬದಲಾಗಿ 50,000/-ಕ್ಕೆ ಹೆಚ್ಚಿಸಿದೆ.

ಮೇಲ್ಕಂಡ ಅಂಶಗಳನ್ನು ಪರಿಗಣಿಸಿ, ದಿನಾಂಕ:06-08-2018ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕೆ ಸಂಬಂಧಿಸಿದಂತೆ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಟಿಪ್ಪಣಿ.

ತೀರ್ಮಾನ: ಮುಖ್ಯ ಅಭಿಯಂತರರು (ಓ.ಎಫ್.ಸಿ) ರವರೊಂದಿಗೆ ಚರ್ಚಿಸಲಾಯಿತು. ಪ್ರಸಕ್ತ ಟಿಪ್ಪಣಿ ಮಂಡನೆ ಮಾಡಿದ ನಂತರ ಟವರ್ ನೋಂದಣಿ ಶುಲ್ಕವನ್ನು ಸರ್ಕಾರದ ಮಟ್ಟದಲ್ಲಿಯೇ ಪರಿಷ್ಕರಣೆ ಮಾಡಲಾಗಿದೆ ಎಂದು ಗಮನಕ್ಕೆ ತಂದರು. ಈಗ ವಿಧಿಸಲಾಗುತ್ತಿರುವ ದರ ಹಾಗೂ ಅದರಲ್ಲಿ ಬದಲಾವಣೆ ಮಾಡುವ ಅವಶ್ಯಕತೆ ಕುರಿತು, ಆಯುಕ್ತರು ಮರುಪರಿಶೀಲಿಸಿ, ಮಂಡಿಸಬೇಕೆಂದು ಸೂಚಿಸಲಾಯಿತು.

(ಗೌರವ್ ಗುಪ್ತ)
ಆಡಳಿತಗಾರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:26/09/2020ರ ನಡವಳಿಗಳು

ವಿಷಯದ ಸಂಖ್ಯೆ: 03(279)/2018-19

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ **ಮೈಸೂರು ರಸ್ತೆ ಜಂಕ್ಷನ್‌ನಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ವರೆಗಿನ ಹೊರವರ್ತುಲ ರಸ್ತೆಯ ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣ ಕಾಮಗಾರಿಯಡಿಯಲ್ಲಿ** ಬರುವ ಕೆ.ಇ.ಬಿ. ಜಂಕ್ಷನ್‌ನ ಮೇಲುಸೇತುವೆ ಯೋಜನೆಗಾಗಿ 03 ಸಂಖ್ಯೆಯ ಖಾಸಗಿ ಸ್ವತ್ತಿನ ಮಾಲೀಕರಿಗೆ ಸೇರಿದ 782.46 ಚ.ಅಡಿ. ಜಾಗವನ್ನು ಕೆ.ಎಂ.ಸಿ. ಕಾಯ್ದೆ 1976 ರ ಸೆಕ್ಷನ್ 175 ರ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ದಿನಾಂಕ: 16-8-2018 ರಂದು ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ನಡೆದ 2ನೇ ದರ ಸಂಧಾನ ಸಭೆಯಲ್ಲಿ ನಿಗದಿಪಡಿಸಿದ ಸಂಧಾನದ ದರ ಮಾರ್ಗಸೂಚಿತ ದರದ 1.90 ಪಟ್ಟಿನಂತೆ (ಅನುಮೋದಿತ ಸಭೆಯ ನಡವಳಿಗಳನ್ನು ಕಡತದಲ್ಲಿರಿಸಿದೆ) ಎಲ್ಲಾ ಖಾಸಗಿ ಸ್ವತ್ತಿನ ಮಾಲೀಕರು ಒಪ್ಪಿಗೆ ಸೂಚಿಸಿದ್ದು, ಒಪ್ಪಿಗೆ ಪತ್ರವನ್ನು ನೀಡಿರುತ್ತಾರೆ.

ಮಾರ್ಗಸೂಚಿತ ದರದ 1.90 ಪಟ್ಟಿನಂತೆ ಖಾಸಗಿ ಸ್ವತ್ತಿನಲ್ಲಿ ಭೂಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಮತ್ತು ಅದರ ಮೌಲ್ಯದ ವಿವರವು ಕೆಳಕಂಡಂತಿರುತ್ತದೆ.

Serial No	Village or Street	Name of the Owner and Address	In the Khatha of	Description of the Building	Proposed Area required for project	Rate as per Sft (Guidence Value vide notification no. CVC/19/ 2016-17 dtd: 30-03-2017	Rate as approved in the negotiation meeting 1.90 times the Guidance Value	Cost as approved in the negotiation meeting 1.90 times the guidance
					Sft	Rs/Sft	Rs	
1	ಹೊಸಕೆರೆಹಳ್ಳಿ	ಆರ್. ಮಹಾದೇವಸ್ವಾಮಿ, ನಂ 942 ಐ 5ನೇ ಮುಖ್ಯ ರಸ್ತೆ, 2ನೇ ಫೇಸ್, 7ನೇ ಬ್ಲಾಕ್, ಹೊಸಕೆರೆಹಳ್ಳಿ, ಬಿ.ಎಸ್.ಕೆ 3ನೇ ಹಂತ	55-482-942 ಐ	ಆರ್.ಸಿ.ಸಿ ಕಟ್ಟಡ ಊ+2	126.32	10400=00	19760.00	24,96,083.00
2	ಹೊಸಕೆರೆಹಳ್ಳಿ	ಆದಪ್ಪ ನಂ 942 ಐ, 5ನೇ ಮುಖ್ಯ ರಸ್ತೆ, 2ನೇ ಫೇಸ್, 7ನೇ ಬ್ಲಾಕ್, ಹೊಸಕೆರೆಹಳ್ಳಿ, ಬಿ.ಎಸ್.ಕೆ 3ನೇ ಹಂತ	55-482-942 ಐ	ಆರ್.ಸಿ.ಸಿ ಕಟ್ಟಡ ಊ+1	224.88	10400=00	19760.00	44,43,629.00
3	ಹೊಸಕೆರೆಹಳ್ಳಿ	ಜಿ.ವಿ.ರಾಜಶೇಖರ್ ನಂ 816 & 817, 5ನೇ ಮುಖ್ಯ ರಸ್ತೆ, 2ನೇ ಫೇಸ್, 7ನೇ ಬ್ಲಾಕ್, ಹೊಸಕೆರೆಹಳ್ಳಿ, ಬಿ.ಎಸ್.ಕೆ 3ನೇ ಹಂತ	55-445-816 & 817	ಖಾಲಿ ನಿವೇಶನ	431.26	10400=00	19760.00	85,21,698.00
		ಒಟ್ಟು			**782.46**			**1,54,61,410.00**

ಮೇಲ್ಕಂಡ ಕೋಷ್ಟಕದಲ್ಲಿ ತಿಳಿಸಿರುವ 03 ಖಾಸಗಿ ಸ್ವತ್ತುಗಳ ಒಟ್ಟು 782.46 ಚ.ಅಡಿಗಳಷ್ಟು ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳಲು ಮಾರ್ಗಸೂಚಿತ ದರದ 1.90 ನಂತೆ ಒಟ್ಟು ರೂ.1,54,61,410/- ಗಳನ್ನು 2018-

19ನೇ ಸಾಲಿನ ಆಯವ್ಯಯದಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಲೆಕ್ಕ ಶೀರ್ಷಿಕೆ P0001 ಅಡಿಯಲ್ಲಿ (04:ಆಸ್ತಿಗಳು ಮತ್ತು ಸ್ವತ್ತುಗಳು ನಿರ್ವಹಣೆ ಪುಟ ಸಂಖ್ಯೆ:50) ರೂ.40.00 ಕೋಟಿಗಳಷ್ಟು ಅನುದಾನವನ್ನು ಮೀಸಲಿಟ್ಟಿರುವುದರಿಂದ, ಇದರಲ್ಲಿ ಭರಿಸಲು ಕೋರಿ ವಿಶೇಷ ಭೂಸ್ವಾಧೀನ ಅಧಿಕಾರಿಗಳನ್ನು ಕೋರಲಾಗಿತ್ತು. ಆದರೆ ಉಪ ಆಯುಕ್ತರು (ಭೂಸ್ವಾಧೀನ ಮತ್ತು ಟಿ.ಡಿ.ಆರ್) ರವರು ಈಗಾಗಲೇ ಉಪ ಆಯುಕ್ತರು (ಭೂಸ್ವಾಧೀನ) ಕಛೇರಿಯಿಂದ ಭೂಸ್ವಾಧೀನಪಡಿಸಿಕೊಂಡು ಭೂ–ಪರಿಹಾರ ಪಾವತಿಸಲು ಹಲವಾರು ವರ್ಷಗಳಿಂದ ಒಟ್ಟು ಮೊತ್ತ ರೂ.1,29,83,62,866/– ಗಳು ಬಾಕಿ ಇರುತ್ತವೆ. ಸದರಿ ಮೊತ್ತವನ್ನು ಸ್ವತ್ತಿನ ಮಾಲೀಕರಿಗೆ ಪಾವತಿಸಲು 2018–19ನೇ ಸಾಲಿನ ರಸ್ತೆ ಅಗಲೀಕರಣ, ಕಸ ಸಂಗ್ರಹಣೆ ಮತ್ತು ಇತರೇ ಕಾರ್ಯಗಳಿಗೆ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ 0001ರ ಲೆಕ್ಕಶೀರ್ಷಿಕೆ ಅಡಿಯಲ್ಲಿ ಕಾಯ್ದಿರಿಸಿದ ರೂ.40.00 ಕೋಟಿಗಳನ್ನು ಪಾಲಿಕೆಯ ಉಪ ಆಯುಕ್ತರು (ಭೂಸ್ವಾಧೀನ) ಕಛೇರಿಯ ಲೆಕ್ಕಶೀರ್ಷಿಕೆ ಅಡಿಯಲ್ಲಿ ಮೀಸಲಿರಿಸಿದೆ.

ಆದುದರಿಂದ ಕೆ.ಇ.ಬಿ. ವೃತ್ತದ ಮೇಲುಸೇತುವೆಯ ಯೋಜನೆಗೆ ಅಗತ್ಯವಿರುವ ರೂ.1,54,61,410/– ಗಳನ್ನು 2018–19 ನೇ ಸಾಲಿನ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿನ ಅನುದಾನದಲ್ಲಿ ಲೆಕ್ಕ ಮರು ಹೊಂದಾಣಿಕೆ ಮಾಡಿಕೊಂಡು, ಸದರಿ ಮೊತ್ತವನ್ನು ಪಾವತಿಸುವ ಅಗತ್ಯವಿರುತ್ತದೆ.

ಮೈಸೂರು ರಸ್ತೆ ಜಂಕ್ಷನ್‌ನಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ವರೆಗಿನ ಹೊರವರ್ತುಲ ರಸ್ತೆಯ ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣದ ಯೋಜನೆಯಡಿಯಲ್ಲಿ ಬರುವ ಕೆ.ಇ.ಬಿ. ವೃತ್ತದ ಮೇಲುಸೇತುವೆ ನಿರ್ಮಾಣಕ್ಕೆ ಅಗತ್ಯವಾಗಿ ಬೇಕಾಗಿರುವ 03 ಸಂಖ್ಯೆಯ ಜಾಗ ಸ್ವತ್ತಿನ ಮಾಲೀಕರಿಗೆ ಸೇರಿದ 782.46 ಚ.ಅಡಿ. ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳಲು ಅಗತ್ಯವಿರುವ ರೂ.1,54,61,410/– ಗಳನ್ನು 2018–19ನೇ ಸಾಲಿನ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಅನುದಾನದಲ್ಲಿ ಲೆಕ್ಕ ಮರು ಹೊಂದಾಣಿಕೆ ಮಾಡುವ ಬಗ್ಗೆ **ಆಯುಕ್ತರವರ ದಿನಾಂಕ:07–01–2019ರ ಟಿಪ್ಪಣಿಯನ್ನು ಒಪ್ಪಿ, ದಿನಾಂಕ:13–02–2019ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕೆ ಸಂಬಂಧಿಸಿದಂತೆ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಟಿಪ್ಪಣಿ.**

ತೀರ್ಮಾನ: **ಉಪ ಆಯುಕ್ತರು (ಭೂಸ್ವಾಧೀನ) ರವರೊಂದಿಗೆ ಚರ್ಚಿಸಲಾಯಿತು. ಟಿಪ್ಪಣಿಯನ್ನು ಸಲ್ಲಿಸಿದ ನಂತರ ಕೆಲವು ಪ್ರಕರಣಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮುಂದುವರೆಸಿ ಮುಕ್ತಾಯಗೊಳಿಸಿರುವುದಾಗಿ ತಿಳಿಸಿದರು. ಈಗಿನ ವಸ್ತುಸ್ಥಿತಿ ಮತ್ತು ಭೂಸ್ವಾಧೀನಕ್ಕೆ ತಗುಲುವ ವೆಚ್ಚವನ್ನು ಹಾಗೂ ಭರಿಸುವ ಸಂಪನ್ಮೂಲಗಳ ಲಭ್ಯತೆ ಕುರಿತು ಮರುಪರಿಶೀಲಿಸಿ, ಪೂರಕ ಟಿಪ್ಪಣಿಯನ್ನು ಆಯುಕ್ತರ ಮೂಲಕ ಮರುಮಂಡಿಸಲು ಸೂಚಿಸಿದೆ.**

(ಗೌರವ ಗುಪ್ತ)
ಆಡಳಿತಗಾರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:26/09/2020ರ ನಡವಳಿಗಳು

ವಿಷಯದ ಸಂಖ್ಯೆ: 04(318)/2019-20

ಪ್ರಸ್ತಾವನೆ:-

ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, **ಸರ್ಕಾರಿ ಸಾಬೂನು ಕಾರ್ಖಾನೆ ಜಂಕ್ಷನ್‌ನಿಂದ ಮಾಗಡಿ ರಸ್ತೆ ಡಿವಿಯೇಶನ್ ರಸ್ತೆ ಜಂಕ್ಷನ್‌ವರೆಗೆ ಡಾ॥ ರಾಜ್‌ಕುಮಾರ್ ರಸ್ತೆಯ ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣ** ಮಾಡಲು ರೂ.44.80 ಕೋಟಿ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ:No.UDD 356 MNY 2012/(1) Bangalore Dated:10-07-2012ರಲ್ಲಿ ಅನುಮೋದನೆ ನೀಡಲಾಗಿದ್ದು, ಸದರಿ ಕಾಮಗಾರಿ ನಿರ್ಮಾಣದ ಗುತ್ತಿಗೆಯನ್ನು ಮೆ॥ಪಿ.ಜೆ.ಬಿ ಇಂಜಿನಿಯರ್ಸ್ ಪ್ರೈ. ಲೀ. ರವರಿಗೆ ದಿನಾಂಕ: 19-5-2014 ರಂದು ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ ಸಂಬಂಧಿಸಿದಂತೆ ಕೆಳಸೇತುವೆ ಪಕ್ಕದಲ್ಲಿ ಅಂದರೆ ಡಾ॥ ರಾಜ್‌ಕುಮಾರ್ ರಸ್ತೆಯ ಪಶ್ಚಿಮ ಭಾಗದಲ್ಲಿ ವಾಹನಗಳ ಓಡಾಟಕ್ಕಾಗಿ ಹಾಲಿ ಇರುವ ರಸ್ತೆಯನ್ನು ವಿಸ್ತರಿಸಬೇಕಾಗಿದ್ದು, ಈ ಕಾಮಗಾರಿಗಾಗಿ ಪಾಲಿಕೆಯ ವಾರ್ಡ್ ಸಂಖ್ಯೆ:67 ರಲ್ಲಿ ಬರುವ ಖಾಸಗಿ ಸ್ವತ್ತು ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ ಸಂಸ್ಥೆಯವರ ಸ್ವತ್ತಿನ ಪೈಕಿ ಸುಮಾರು 1011.61 ಚ.ಮೀ.ಅವಶ್ಯಕತೆ ಇರುತ್ತದೆ. ಸದರಿ ಸ್ವತ್ತನ್ನು ಭೂಸ್ವಾಧೀನ ಕಾಯ್ದೆಯಂತೆ ವಶಪಡಿಸಿಕೊಳ್ಳಲು ಹೆಚ್ಚಿನ ಕಾಲಾವಧಿಬೇಕಾಗಿರುವುದರಿಂದ ಹಾಗೂ ಯೋಜನೆಯ ಪ್ರಗತಿಗೂ ಸಹ ತೊಡಕು ಉಂಟಾಗಿರುವುದರಿಂದ ಸದರಿ ಸ್ವತ್ತನ್ನು ಕೆ.ಎಂ.ಸಿ ಕಾಯ್ದೆ 1976 ರ ಕಲಂ 175 ರಂತೆ ನೇರ ಖರೀದಿಯ ಮುಖಾಂತರ ಖರೀದಿಸಲು ಸ್ವತ್ತಿನ ಮಾಲೀಕರ ನಡುವೆ ದರಸಂಧಾನವನ್ನು ನಡೆಸಿ ಸದರಿ ಭೂಮಿಯನ್ನು ಖರೀದಿಸಲು ಕ್ರಮ ಜರುಗಿಸಲಾಗಿರುತ್ತದೆ. ಅದರಂತೆ ಕೇಂದ್ರ ಕಛೇರಿಯ ದರ ಸಂಧಾನ ಸಮಿತಿ ಅಧ್ಯಕ್ಷರಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:27-8-2016 ರಂದು ಏರ್ಪಡಿಸಿದ ಸಭೆಯಲ್ಲಿ ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ ರವರೊಂದಿಗೆ ಸಂಧಾನ ನಡೆಸಿ ದರ ಸಂಧಾನ ಸಮಿತಿಯ ಸಭೆಯ ತೀರ್ಮಾನದಂತೆ ಸದರಿ ಪ್ರದೇಶದ 2016ನೇ ಸಾಲಿನ ಮಾರ್ಗಸೂಚಿ ದರ ಬೆಲೆ ರೂ.96900/- ಪ್ರತಿ ಚ.ಮೀ. ಇದ್ದು ಶೇಕಡ 20% ಹೆಚ್ಚು ಅಂದರೆ ಪ್ರತಿ ಚ.ಮೀ.ಗೆ ರೂ.96900+19380=1,16,280/- ರಂತೆ ಪ್ರತಿ ಚ.ಅಡಿಗೆ ಅಂದಾಜು ಅಳತೆ 1011.61 ಚ.ಮೀ ಗಳಿಗೆ ಅಂತಿಮವಾಗಿ ಸೆಂಟ್ ಮೆರೀಸ್ ಇಮ್ಯಾಕೂಲೇಟ್ ರವರ ಒಪ್ಪಿಗೆ ಮೇರೆಗೆ ರೂ.11,70,00,000/- ಗಳನ್ನು ಪಾವತಿಸಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ಸಭೆಯ ತೀರ್ಮಾನದಂತೆ ಭೂಪರಿಹಾರವನ್ನು ಪಾವತಿಸಲು ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರ-3) ಹಾಗೂ ಮುಖ್ಯ ಅಭಿಯಂತರರು (ಯೋಜನೆ ಕೇಂದ್ರ) ರವರ ಮುಖೇನ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸ್ವತ್ತಿನ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಸರ್ವೆ ನಂ.	ಖಾತೆದಾರರು/ ಅನುಭವದಾರರ ಹೆಸರು	ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣಕ್ಕಾಗಿ ಬೇಕಾಗಿರುವ ವಿಸ್ತೀರ್ಣ (ಚ.ಮೀ)	ಮಾರ್ಗಸೂಚಿ ದರ ಬೆಲೆ ರೂ.(ಪ್ರತಿ ಚ.ಮೀ.ಗೆ) ಹಾಗೂ ಶೇ.20 ರಷ್ಟು ಹೆಚ್ಚುವರಿ 96900+20%	ದರ ಸಂಧಾನ ಸಮಿತಿಯು ಅನುಮೋದಿಸಿದ ಪರಿಹಾರದ ಮೊತ್ತ ರೂ.
1	180	ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ (ಸಂಸ್ಥೆ)	1011.61 ಚ.ಮೀ	116280	11,70,00,000/-
					ಒಟ್ಟು ರೂ. 11,70,00,000/-

ಈ ಹಿನ್ನಲೆಯಲ್ಲಿ ದಿನಾಂಕ:27-8-2016 ರಂದು ಕೆ.ಎಂ.ಸಿ ಕಾಯ್ದೆ 1976ರ ಕಲಂ 175 ರೀತ್ಯ ಏರ್ಪಡಿಸಿದ ಕೇಂದ್ರಕಛೇರಿಯ ದರ ಸಂಧಾನ ಸಮಿತಿಯ ತೀರ್ಮಾನದಂತೆ ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ ರವರ ಸ್ವತ್ತಿನ ಭಾಗವಾದ 1011.61 ಚ.ಮೀ. ವಿಸ್ತೀರ್ಣದ ಜಾಗವನ್ನು ನೇರ ಖರೀದಿಯ ಮುಖಾಂತರ ಖರೀದಿಸಿದ ಮೊತ್ತ ರೂ.11,70,00,000/- (ಹನ್ನೊಂದು ಕೋಟಿ ಎಪ್ಪತ್ತು ಲಕ್ಷಗಳ ರೂ) ಗಳನ್ನು ಪಾವತಿಸಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ **ಮಾನ್ಯ ಆಯುಕ್ತರ ದಿನಾಂಕ:07-12-2018ರ ಟಿಪ್ಪಣಿಗೆ ಸಂಬಂಧಿಸಿದಂತೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:16-02-2019ರ ನಿರ್ಣಯ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-02-2019ರ ನಿರ್ಣಯಗಳಿಗೆ ಸಂಬಂಧಿಸಿದಂತೆ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಟಿಪ್ಪಣಿ.**

ತೀರ್ಮಾನ: **ಉಪ ಆಯುಕ್ತರು (ಭೂಸ್ವಾಧೀನ) ರವರೊಂದಿಗೆ ಚರ್ಚಿಸಲಾಯಿತು. ಟಿಪ್ಪಣಿಯನ್ನು ಸಲ್ಲಿಸಿದ ನಂತರ ಕೆಲವು ಪ್ರಕರಣಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮುಂದುವರೆಸಿ ಮುಕ್ತಾಯಗೊಳಿಸಿರುವುದಾಗಿ ತಿಳಿಸಿದರು. ಈಗಿನ ವಸ್ತುಸ್ಥಿತಿ ಮತ್ತು ಭೂಸ್ವಾಧೀನಕ್ಕೆ ತಗುಲುವ ವೆಚ್ಚವನ್ನು ಹಾಗೂ ಭರಿಸುವ ಸಂಪನ್ಮೂಲಗಳ ಲಭ್ಯತೆ ಕುರಿತು ಮರುಪರಿಶೀಲಿಸಿ, ಪೂರಕ ಟಿಪ್ಪಣಿಯನ್ನು ಆಯುಕ್ತರ ಮೂಲಕ ಮರುಮಂಡಿಸಲು ಸೂಚಿಸಿದೆ.**

(ಗೌರವ ಗುಪ್ತ)
ಆಡಳಿತಗಾರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:26/09/2020ರ ನಡವಳಿಗಳು

ವಿಷಯದ ಸಂಖ್ಯೆ: 05(439)/2019-20

ಪ್ರಸ್ತಾವನೆ:-

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಆಯುಕ್ತರ ದಿನಾಂಕ: 16-01-2019ರ ಸದರಿ ಕಾರಿಡಾರ್‌ನ ಹೂಡಿ ಜಂಕ್ಷನ್, ಬಿಗ್‌ಬಜಾರ್ ಜಂಕ್ಷನ್ ಮತ್ತು ಹೋಪ್ ಫಾರಂ ಜಂಕ್ಷನ್‌ಗಳಲ್ಲಿ ಕ್ರಮವಾಗಿ ನಾಲ್ಕು ಪಥದ ಮೇಲು ಸೇತುವೆ ಏಕಮುಖ ಕೆಳಸೇತುವೆ ಮತ್ತು ದ್ವಿಮುಖ ನಾಲ್ಕು ಪಥದ ಕೆಳಸೇತುವೆ ನಿರ್ಮಾಣ ಮಾಡಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಆಗಿದ್ದು, ಸದರಿ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನ ಮಾಡಿಕೊಳ್ಳಬೇಕಿರುತ್ತದೆ. ಈ ಸಂಬಂಧ ನಿಯಮಾವಳಿಗಳ ರೀತ್ಯ ಚಾಲ್ತಿಯಲ್ಲಿರುವ ಭೂಸ್ವಾಧೀನ ಕಾಯ್ದೆಯ ನಿಯಮಾವಳಿಗಳನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಭೂಪರಿಹಾರದ ಮೊತ್ತದ ಮೇಲೆ ಶೇ.100% ರಷ್ಟು ಶಾಸನಬದ್ಧಭತ್ಯೆ **(Solatium)** ಹಾಗೂ ಹೆಚ್ಚುವರಿ ಮಾರುಕಟ್ಟೆ ಬೆಲೆ ಶೇ.12 ರಷ್ಟು ಭೂಪರಿಹಾರ ಪಾವತಿಸುವ ದಿನದವರೆಗೆ ಪರಿಹಾರದ ಮೊತ್ತವನ್ನು ನೀಡಬೇಕಾಗುತ್ತಿದ್ದು, ಇವೆಲ್ಲವನ್ನ ಒಟ್ಟುಗೂಡಿಸಿದಲ್ಲಿ ಪಾಲಿಕೆಯಿಂದ ಪಾವತಿಸುವ ಪರಿಹಾರ ಮೊತ್ತವು ಬೃಹತ್ ಪ್ರಮಾಣವಾಗುವುದರಿಂದ ಪಾಲಿಕೆಗೆ ಆರ್ಥಿಕ ಹೊರೆಯನ್ನು ತಪ್ಪಿಸುವ ಸಲುವಾಗಿ ಭೂಮಾಲೀಕರೊಂದಿಗೆ ದರಸಂಧಾನ ಮಾಡುವುದು ಸೂಕ್ತವಾಗಿರುತ್ತದೆ ಎಂದು ನಿಶ್ಚಯಿಸಿ ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 175 ರಡಿ ಕ್ರಮಕೈಗೊಳ್ಳಲು ಪಾಲಿಕೆಯಲ್ಲಿ ರಚಿಸಿರುವ ದರಸಂಧಾನ ಸಮಿತಿ ರವರು ಭೂಮಾಲೀಕರೊಂದಿಗೆ ಪರಸ್ಪರ ಚರ್ಚೆ ನಡೆಸಿ ಹೂಡಿ ಜಂಕ್ಷನ್‌ನಲ್ಲಿ ಸ್ವತ್ತುಗಳಿಗೆ ಃಒಖಅಟ ಪರಿಹಾರದ ಮಾದರಿಯಲ್ಲಿ ಪ್ರತಿ ಚ.ಅಡಿಗೆ ನೀಡಿರುವ ದರಗಳನ್ನು ಪರಿಗಣಿಸಿ ಸ್ಥಿರಾಸ್ತಿಗಳಿಗೆ ಎರಡು ಪಟ್ಟು ಹೆಚ್ಚುವರಿಯಾಗಿ ಅಂದರೆ ಒಂದು ಚ.ಅಡಿಗೆ ರೂ.7500/- ಗಳಿದ್ದು ಎರಡು ಪಟ್ಟು ಅಂದರೆ ರೂ.7500X2=ರೂ.15000/- ಪ್ರತಿ ಚ.ಅಡಿಗೆ+ಕಟ್ಟಡದ ಮೌಲ್ಯ ಮಾಪನ ಮಾಡಿ ಸವಕಳಿ ತೆಗೆದು ಕಟ್ಟಡದ ಮೌಲ್ಯವನ್ನ ಸೇರಿಸಿ ಪರಿಹಾರ ನೀಡುವ ಬಗ್ಗೆ ದಿ:07-12-2018 ರಂದು ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಈ ಕೆಳಕಂಡ ಎಲ್ಲಾ ಸ್ವತ್ತುದಾರರಿಗೆ ಅವರ ಹೆಸರಿನ ಮುಂದೆ ತೋರಿಸಿರುವ ಮೊತ್ತಕ್ಕೆ ಒಪ್ಪಿರುವುದರಿಂದ ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 175 ರಂತೆ ಸ್ವತ್ತಿನ ಮಾಲೀಕರುಗಳೊಂದಿಗೆ ನೇರ ಸಂಧಾನ ನಡೆಸಿ ಖಾಸಗಿ ಸ್ವತ್ತುಗಳನ್ನು ಖರೀದಿ ಮಾಡುವುದು ಸೂಕ್ತವೆಂದು ಕಂಡು ಬಂದ ಹಿನ್ನಲೆಯಲ್ಲಿ ದಿ:07-12-2018 ರಂದು ಸಭೆಯನ್ನು ಆಯೋಜಿಸಲಾಗಿತ್ತು.

Valuation Statement Showing the Proposed Land to be Acquired for Construction of Flyover at Hoodi Junction

Left hand Side

Sl. No	Name of the Owner	Area of site in sqm	Two times market value (as paid by BMRCL in Rs.)	Building area in sqm	Building Value in Rs.	Total Value of the property in Rs.
1	2	3	4	5	6	7
1	ಶಾರದಮ್ಮ	25.99	4196345.00	-	-	4196345.00
2	ರಾಜಾ ನಾರಾಯಣರೆಡ್ಡಿ ಹೆಚ್.ಎನ್. ಲೇ॥ಹನುಮರೆಡ್ಡಿ & ರಾಜ ನಾರಾಯಣ ರೆಡ್ಡಿ ಹೆಚ್.ರಾಜರಾಂರೆಡ್ಡಿ	7.73	1248086.00	-	-	1248086.00
3	ಬಿಬಿಎಂಪಿ ಜಾಗ		-	-	-	-

	54-52-44 ಜಿ.ಐ.ಸ್.ನಂ.					
4	ನಾರಾಯಣಸ್ವಾಮಿ ಮುನಿರಡ್ಡಿ	298.53	48200654.00	291.08	1742120.00	49942774.00
5	ನಂಜುಂಡ ರೆಡ್ಡಿ (ಸಪ್ತಗಿರಿ ಬಾರ್)	49.96	8066542.00	12.30	183499.00	8250041.00
6	ಕೃಷ್ಣರೆಡ್ಡಿ (ಶ್ರೀವಾರು ಟೈಲರ್ಸ್)	31.64	5108594.00	3.64	35191.00	5143785.00
7	ಗೌರಮ್ಮ ತಮ್ಮರೆಡ್ಡಿ (ದೇವೇಂದ್ರ ಟೈಲರ್ಸ್)	24.57	3967072.00	17.46	222846.00	4189918.00
8	ಸದ್ಗುಣ ಡಿ ಕೋಂ ಲೇ॥ಗುರುಮೂರ್ತಿ (ಲಕ್ಷ್ಮೀ ಫುಟ್‌ವೇರ್ಸ್)	23.00	3713580.00	10.12	107742.00	3821322.00
9	ಪುಷ್ಪಾ ಶಿಪ್ಪರೆಡ್ಡಿ (ಶುಭಸಾಗರ್ ಹೊಟೇಲ್)	47.27	7632214.00	7.02x3=21.06	287453.00	7919667.00
10	ಹೆಚ್.ಪಿ.ವೆಂಕಟೇಶ್ ರೆಡ್ಡಿ	57.24	9241970.00	13.80	170138.00	9412108.00
10ಎ	ಹೆಚ್.ಪಿ.ವೆಂಕಟೇಶ್ ರೆಡ್ಡಿ	34.94	5641412.00	10.24	130698.00	5772110.00
11	ಸತೀಶ್‌ಗೌಡ	26.81	4328743.00	-	-	4328743.00
12	ಸೂರ್ಯಶಕ್ತಿ ಅಪಾರ್ಟ್‌ಮೆಂಟ್ಸ್	145.50	23492430.00	-	-	23492430.00
13	ನೆಪೋಜೈಮ್ ಸೌತ್ ಏಷಿಯಾ ಪ್ರೈ.ಲಿ.	4.95	799227.00	-	-	799227.00
	Sub Total (A) L/S	**778.13**	**125636869.00**	**379.70**	**2879687.00**	**128516556.00**

Valuation Statement Showing the Proposed Land to be Acquired for Construction of Flyover at Hoodi Junction

Right hand Side

Sl. No	Name of the Owner	Area of site in sqm	Two times market value (as paid by BMRCL in Rs.)	Building area in sqm	Building Value in Rs.	Total Value of the property in Rs.
1	2	3	4	5	6	7
1	ಎಬಿಬಿ ಪಾರ್ಸಲ್ ಸರ್ವಿಸ್ ಚಾಮುಂಡೇಶ್ವರಿ ಶುಗರ್ ಲಿ.	41.14	6642464.00	-	-	6642464.00
2	ಚಾಮುಂಡೇಶ್ವರಿ ಶುಗರ್ ಲಿ.	4.56	736258.00	-	-	736258.00
3	ಬಿಬಿಎಂಪಿ ಜಾಗ (ಉರ್ದುಶಾಲೆ)	-	-	-	-	-
4	ಮೆ॥ಕೃಷ್ಣ ಹೋಮ್ಸ್	56.16	9067594.00	-	-	9067594.00
5	ಲೇ॥ಭೈರಪ್ಪ ಹೆಂಡತಿ ನಾರಾಯಣಮ್ಮ	95.67	15446878.00	165.55	1685382.00	17132260.00
6	ನಾಗೇಂದ್ರ ಶೆಟ್ಟಿ ಮತ್ತು ಲಕ್ಷ್ಮೀನಾರಾಯಣ ಶೆಟ್ಟಿ (ವಿನಾಯಕ ಜನರಲ್ ಸ್ಟೋರ್ ಮತ್ತು ಮೊಬೈಲ್	9.99	1612985.00	25.53	325853.00	1938838.00

	ಸ್ಟೋರ್)					
7	ಷಫಿವುಲ್ಲಾಖಾನ್ (ಲಕ್ಷ್ಮೀ ಫ್ಯಾನ್ಸಿ ಸ್ಟೋರ್ ಪೂನಂ ಎಲೆಕ್ಟ್ರಾನಿಕ್ಸ್)	48.13	7771070.00	6.21	79265.00	7850335.00
8	ಖಮರ್ ತಾಜ್ ಆ/ಾ ಲೇ॥ಅಕ್ಬರ್ ಸಾಹೇಬ್	26.04	4204418.00	–	–	4204418.00
9	ಹೆಚ್.ಸಿ.ಕೃಷ್ಣಪ್ಪ ಮತ್ತು ಜಯಮ್ಮ (ಬಾಬಾ ಸ್ಟುಡಿಯೋ)	46.80	7556328.00	31.14	397454.00	7953782.00
10	ಜಯರಾಮ್ ಸಿಂಗ್ (ಬೃಂದಾವನ್ ಬಾರ್)	28.31	4570933.00	21.09	269189.00	4840122.00
11	ಯಕೀನ್ ಸಾಬ್ & ನಜೀರ್	36.45	5885217.00	34.20	436510.00	6321727.00
12	ನಾರಾಯಣರೆಡ್ಡಿ	13.65	2203920.00	–	–	2203920.00
13	ಹೆಚ್.ಎಂ. ಚಂದ್ರಶೇಖರ್ ಮತ್ತು ಹೆಚ್.ಎಂ.ಮುಕುಂದ	23.66	3820144.00	–	–	3820144.00
14	ನಾತಿಬಾಯಿ (ಬಾವೇಶ್ ಷೋರಂ)	2.10	339066.00	–	–	339066.00
15	ಪದ್ಮರಾಜ್ (ಪೂಜಾ ಟೆಕ್ಸ್‌ಟೈಲ್ಸ್)	4.27	689434.00	0.61	16535.00	705969.00
16	ಮಂಜುನಾಥ ಮತ್ತು ನಾರೇಂದ್ರ (ಲಕ್ಷ್ಮೀ ನರಸಿಂಹ ಎಲೆಕ್ಟ್ರಿಕಲ್ಸ್)	10.08	1627517.00	7.20	99016.00	1726533.00
17	ನರಸರಾಜು (ಕುಮಾರ್ ವೈನ್ಸ್ ಸ್ಟೋರ್ಸ್)	6.55	1057563.00	–	–	1057563.00
18	ಎನ್.ಪುಷ್ಪ ತಿಪ್ಪಾರೆಡ್ಡಿ (ಆಶಿರ್ವಾದ್ ತಿಂಡಿ ಮನೆ)	45.88	7407785.00	–	–	7407785.00
19	ಸಂಪತ್‌ಕುಮಾರ್ (ಸಂತೋಷ್ ಅಟೋಮೊಬೈಲ್ಸ್)	61.87	9989530.00	–	–	9989530.00
20	ಅಶ್ವಥ್ ನಾರಾಯಣಸ್ವಾಮಿ S/o ನಾರಾಯಣಸ್ವಾಮಿ ಮತ್ತು ಧನಲಕ್ಷ್ಮಿ W/o ಅಶ್ವಥ್ ನಾರಾಯಣಸ್ವಾಮಿ (ಚೈತನ್ಯ ಟೆಕ್ನಿ ಸ್ಕೂಲ್)	40.00	6458400.00	–	–	6458400.00
21	ಹೆಚ್.ಕೆ.ಸುಬ್ಬರಾಜು ಲೇ॥ಕೃಷ್ಣರಾಜು	55.20	8912592.00	–	–	8912592.00
22	ರವಿಚಂದ್ರ	40.00	6458400.00	–	–	6458400.00
	Sub-Total (B) R/s	696.51	112458505.00	291.53	3309204.00	115767709.00
	Sub-Total (A) L/s	778.13	125636869.00	379.70	2879687.00	128516556.00
	Grand Total (A) +(B)	1434.64	238095374.00	671.23	6188891.00	244284265.00

ಈ ಮೇಲಿನ ಎಲ್ಲಾ ಭೂಮಾಲೀಕರ ಹೆಸರಿನ ಮುಂದೆ ತೋರಿಸಿರುವ ಒಟ್ಟು ಭೂ ಪರಿಹಾರದ ಮೊತ್ತ ರೂ.24,42,84,265.00 (ಇಪ್ಪತ್ತ್ನಾಲ್ಕು ಕೋಟಿ ನಲವತ್ತೆರಡು ಲಕ್ಷ ಎಂಭತ್ತ್ನಾಲ್ಕು ಸಾವಿರದ ಇನ್ನೂರ ಅರವತ್ತೈದು ರೂ.ಗಳು ಮಾತ್ರ)ನ್ನು ಪಾವತಿಸಲು ಪಾಲಿಕೆಯು 2018-19ನೇ ಸಾಲಿನ ಆಯವ್ಯಯದ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ

ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ **ಮಾನ್ಯ ಆಯುಕ್ತರ ದಿನಾಂಕ: 16-01-2019ರ ಟಿಪ್ಪಣಿ. ಸದರಿ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 15-06-2019ರ ಸಭೆಯ ನಿರ್ಣಯ. ಸದರಿ ನಿರ್ಣಯವನ್ನು ಒಪ್ಪುತ್ತಾ ಆಯುಕ್ತರ ಟಿಪ್ಪಣಿಯಲ್ಲಿ 2018-19ನೇ ಸಾಲಿನ ಆಯವ್ಯಯದಲ್ಲಿ ಭರಿಸುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ. ಆದುದರಿಂದ ಆಯುಕ್ತರು ಅನುದಾನ/ನಿಧಿ ಲಭ್ಯತೆ ಮೇರೆಗೆ ಕ್ರಮ ಕೈಗೊಳ್ಳುವುದೆಂದು ದಿನಾಂಕ:19-07-2019ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕೆ ಸಂಬಂಧಿಸಿದಂತೆ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಟಿಪ್ಪಣಿ.**

ತೀರ್ಮಾನ: **ಉಪ ಆಯುಕ್ತರು (ಭೂಸ್ವಾಧೀನ) ರವರೊಂದಿಗೆ ಚರ್ಚಿಸಲಾಯಿತು. ಟಿಪ್ಪಣಿಯನ್ನು ಸಲ್ಲಿಸಿದ ನಂತರ ಕೆಲವು ಪ್ರಕರಣಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮುಂದುವರೆಸಿ ಮುಕ್ತಾಯಗೊಳಿಸಿರುವುದಾಗಿ ತಿಳಿಸಿದರು. ಈಗಿನ ವಸ್ತುಸ್ಥಿತಿ ಮತ್ತು ಭೂಸ್ವಾಧೀನಕ್ಕೆ ತಗುಲುವ ವೆಚ್ಚವನ್ನು ಹಾಗೂ ಭರಿಸುವ ಸಂಪನ್ಮೂಲಗಳ ಲಭ್ಯತೆ ಕುರಿತು ಮರುಪರಿಶೀಲಿಸಿ, ಪೂರಕ ಟಿಪ್ಪಣಿಯನ್ನು ಆಯುಕ್ತರ ಮೂಲಕ ಮರುಮಂಡಿಸಲು ಸೂಚಿಸಿದೆ.**

(ಗೌರವ ಗುಪ್ತ)
ಆಡಳಿತಗಾರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:26/09/2020ರ ನಡವಳಿಗಳು

ವಿಷಯದ ಸಂಖ್ಯೆ: 08(566)/2019-20

ಪ್ರಸ್ತಾವನೆ:-

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:117, ಶಾಂತಿನಗರ ವ್ಯಾಪ್ತಿಯಲ್ಲಿ ಹೊಸೂರು ಲಷ್ಕರ್ ಮುಖ್ಯರಸ್ತೆಯನ್ನು (ಆನೇಪಾಳ್ಯ ಜಂಕ್ಷನ್) RMP-2015 ರ ಪ್ರಕಾರ 30 ಮೀ. ರಸ್ತೆ ಸಾರ್ವಜನಿಕ ಉದ್ದೇಶಕ್ಕಾಗಿ ಅಗಲೀಕರಣಗೊಳಿಸಲು ಅಗತ್ಯವಿರುವ ಆನೇಪಾಳ್ಯ ಜಂಕ್ಷನ್‌ನಲ್ಲಿ ಬರುವ 17 ಖಾಸಗಿ ಸ್ವತ್ತುಗಳು 3 ಬಿಬಿಎಂಪಿ ಮತ್ತು ಸರ್ಕಾರದ ಸ್ವತ್ತುಗಳಲ್ಲಿನ 2504.85 ಚ.ಮೀ ವಿಸ್ತೀರ್ಣದ ಜಾಗವನ್ನು ರಸ್ತೆ ಅಗಲೀಕರಣಕ್ಕೆ ಒಳಪಟ್ಟಿರುವ ಖಾಸಗಿ ಸ್ವತ್ತುಗಳ ಭೂಮಾಲೀಕರಿಗೆ ಪರಿಹಾರವನ್ನು ಕೆ.ಎಂ.ಸಿ ಕಾಯ್ದೆ-1976 ಸೆಕ್ಷನ್-175 ರಂತೆ ಪಾವತಿಸಲು ನೇರ ಖರೀದಿ ಮುಖಾಂತರ ದಿ:07-12-2018 ರಂದು ದರಸಂಧಾನ ಸಭೆಯನ್ನು ಕರೆದು ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ ಸಭೆಯಲ್ಲಿ ನಿಗಧಿಪಡಿಸಿದ ಮೊತ್ತವನ್ನು ಪಾವತಿಸಿ ಸ್ವತ್ತುಗಳನ್ನು ಪಾಲಿಕೆ ಸುಪರ್ದಿಗೆ ಪಡೆದು ಅಭಿಯಂತರರ ವಿಭಾಗಕ್ಕೆ ಹಸ್ತಾಂತರಿಸುವಂತೆ ಪಾಲಿಕೆಯ ಮುಖ್ಯ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ರವರು ಉಪ ಆಯುಕ್ತರು (ಭೂಸ್ವಾಧೀನ) ವಿಭಾಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಭೂಸ್ವಾಧೀನ ವಿಭಾಗದಿಂದ ರಸ್ತೆ ಅಗಲೀಕರಣಕ್ಕೆ ಒಳಪಟ್ಟಿರುವ ಖಾಸಗಿ ಸ್ವತ್ತಿನ ಭೂಮಾಲೀಕರಿಗೆ ಮಾಲೀಕತ್ವದ ದಾಖಲಾತಿಗಳನ್ನು ಒದಗಿಸಲು ಸೂಚಿಸಲಾಗಿ 17 ಖಾಸಗಿ ಸ್ವತ್ತಿನ ಪೈಕಿ 3 ಸ್ವತ್ತುದಾರರು ತಮ್ಮ ಮಾಲೀಕತ್ವದ ದಾಖಲಾತಿಗಳ ಅನ್ವಯ ಭೂಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ, ಉಳಿದ 14 ಸ್ವತ್ತುಗಳು ವಿವಾದಾತ್ಮಕವಿರುವುದು ಕಂಡುಬಂದಿರುವುದರಿಂದ ಇದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಪರಿಹಾರ ಪಾವತಿಸುವುದು ಕಷ್ಟ ಸಾಧ್ಯ ಮತ್ತು ಅಗಲೀಕರಣದ ಯೋಜನೆಯು ವಿಳಂಬವಾಗುವುದರಿಂದ ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರ ವ್ಯಾಪ್ತಿಯ ವಿವಿಧ ಇಲಾಖೆ/ಪ್ರಾಧಿಕಾರಗಳ ಸಮನ್ವಯ ಸಮಿತಿಯ ದಿ:05-11-2019 ರಂದು ನಡೆದ ಸಭೆಯಲ್ಲಿ ಆನೇಪಾಳ್ಯ ಜಂಕ್ಷನ್ ರಸ್ತೆ ಅಗಲೀಕರಣಕ್ಕೆ ಒಳಪಟ್ಟಿರುವ ಸ್ವತ್ತುಗಳನ್ನು ಭೂಸ್ವಾಧೀನ ಕಾಯ್ದೆ-2013ರ ರೀತ್ಯ ಭೂಸ್ವಾಧೀನಪಡಿಸಿಕೊಳ್ಳಲು ಸೂಚಿಸಿರುವುದರಿಂದ ಈ ಕಛೇರಿಯ ಪತ್ರ ಸಮಸಂಖ್ಯೆ ದಿ:06-11-2019ರ ಪತ್ರದಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲು ಈ ಕೆಳಕಂಡ ಅಂಶಗಳಿಗೆ ಸರ್ಕಾರದಿಂದ ಅನುಮತಿ ಕೋರಿದೆ.

ಈ ಹಿಂದೆ ಪಾಲಿಕೆಯಿಂದ ಕೆ.ಎಂ.ಸಿ ಕಾಯ್ದೆ-1976, ಸೆಕ್ಷನ್-175 ರಂತೆ ಪರಿಹಾರ ನೀಡಲು ಕೈಗೊಂಡಿರುವ ಕ್ರಮವನ್ನು ಹಿಂಪಡೆಯಲು ಅನುಮತಿ.

ಭೂಸ್ವಾಧೀನ ಕಾಯ್ದೆ-2013ರ ರೀತ್ಯ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಗೊಳ್ಳಲು 11(1) ರೀತ್ಯ ಪ್ರಾಥಮಿಕ ಅಧಿಸೂಚನೆ ಹೊರಡಿಸಲು ಅನುಮತಿ.

ಕರ್ನಾಟಕ ಕಾಯ್ದೆ ಸಂಖ್ಯೆ:16-2019ರ ಕಲಂ 10-A(b) ಅನುಸಾರ ಸಾಮಾಜಿಕ ಪರಿಣಾಮ ನಿರ್ಧರಣಾ ಕಾರ್ಯಕ್ಕೆ ವಿನಾಯಿತಿ ನೀಡಿ ಅಧಿಸೂಚನೆ ಹೊರಡಿಸಲು ಕೋರಿದೆ.

ಕರ್ನಾಟಕ ಕಾಯ್ದೆ ಸಂಖ್ಯೆ:16-2019 ಕಲಂ 31-A ರಡಿಯಲ್ಲಿ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾರ್ಯ ಅನುಷ್ಠಾನಕ್ಕೆ ಇಡಿಗಂಟು ರೂಪದ ಪರಿಹಾರ ಸರ್ಕಾರದ ಹಂತದಲ್ಲಿ ಘೋಷಿಸಿ ಸದರಿ ಪರಿಹಾರ ವಿಶೇಷ ಭೂಸ್ವಾಧೀನಾಧಿಕಾರಿ ರವರ ಹಂತದಲ್ಲಿ ಪಾವತಿಸಲು ಅನುಮತಿ ಕೋರಿದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಪತ್ರ ಸಂಖ್ಯೆ:ನಅಇ/207/ಎಂಎನ್‌ಜಿ/2019, ದಿ:12–12–2019ರ ಪತ್ರದ (ಪ್ರತಿ ಲಗತ್ತಿಸಿದೆ) ಕಂಡಿಕೆ–'ಆ' ಅನ್ವಯ ಕೆ.ಎಂ.ಸಿ ಕಾಯ್ದೆ–1976 ಸೆಕ್ಷನ್–175 ರೀತ್ಯ ಆನೇಪಾಳ್ಯ ಜಂಕ್ಷನ್ ರಸ್ತೆ ಅಗಲೀಕರಣಕ್ಕೆ ಒಳಪಟ್ಟಿರುವ ಖಾಸಗಿ ಸ್ವತ್ತುಗಳಿಗೆ ಪರಿಹಾರ ಪಾವತಿಸಲು ಪಾಲಿಕೆ ಕೌನ್ಸಿಲ್ ಸಭೆಯ ನಿರ್ಣಯ ದಿನಾಂಕ:27–02–2019, ವಿಷಯ ಸಂಖ್ಯೆ:261/2018–19ರ ನಿರ್ಣಯವನ್ನು ಹಿಂಪಡೆಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರವರ ದಿನಾಂಕ:13–01–2020ರ ಟಿಪ್ಪಣಿ.

ತೀರ್ಮಾನ: ಉಪ ಆಯುಕ್ತರು (ಭೂಸ್ವಾಧೀನ) ರವರೊಂದಿಗೆ ಚರ್ಚಿಸಲಾಯಿತು. ಟಿಪ್ಪಣಿಯನ್ನು ಸಲ್ಲಿಸಿದ ನಂತರ ಕೆಲವು ಪ್ರಕರಣಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮುಂದುವರೆಸಿ ಮುಕ್ತಾಯಗೊಳಿಸಿರುವುದಾಗಿ ತಿಳಿಸಿದರು. ಈಗಿನ ವಸ್ತುಸ್ಥಿತಿ ಮತ್ತು ಭೂಸ್ವಾಧೀನಕ್ಕೆ ತಗುಲುವ ವೆಚ್ಚವನ್ನು ಹಾಗೂ ಭರಿಸುವ ಸಂಪನ್ಮೂಲಗಳ ಲಭ್ಯತೆ ಕುರಿತು ಮರುಪರಿಶೀಲಿಸಿ, ಪೂರಕ ಟಿಪ್ಪಣಿಯನ್ನು ಆಯುಕ್ತರ ಮೂಲಕ ಮರುಮಂಡಿಸಲು ಸೂಚಿಸಿದೆ.

(ಗೌರವ ಗುಪ್ತ)
ಆಡಳಿತಗಾರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:26/09/2020ರ ನಡವಳಿಗಳು

ವಿಷಯದ ಸಂಖ್ಯೆ: 09(02)/2020-21

ಪ್ರಸ್ತಾವನೆ:-

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಹದೇವಪುರ ವಲಯದ ದೊಡ್ಡೇನಕ್ಕುಂದಿ ವಾರ್ಡ್‌ಸಂಖ್ಯೆ-85ರ ವ್ಯಾಪ್ತಿಯ ಹಳೆ ವಿಮಾನ ನಿಲ್ದಾಣ ರಸ್ತೆಯಿಂದ ವಿಬ್‌ಗಯಾರ್ ಶಾಲೆ ಮೂಲಕ ತೂಬರಹಳ್ಳಿ ಎಕ್ಸ್‌ಟೆನ್ಷನ್‌ಗೆ ಸಂಪರ್ಕಿಸುವ ರಸ್ತೆಯು ತುಂಬಾ ಕಿರಿದಾಗಿದ್ದು, ಸಾರ್ವಜನಿಕರ ಮತ್ತು ವಾಹನ ಸಂಚಾರಕ್ಕೆ ತೊಂದರೆ ಉಂಟಾಗುತ್ತಿರುವುದರಿಂದ ಸ್ಥಳೀಯರ ಮನವಿ ಮೇರೆಗೆ ರಸ್ತೆ ಅಗಲೀಕರಣ ಹಾಗೂ ಡಾಂಬರೀಕರಣ ಮಾಡುವ ಬಗ್ಗೆ ದಿನಾಂಕ: 09/09/2015 ರಂದು ಮಾನ್ಯ ಆಡಳಿತಗಾರರು ಸಭೆ ನಡೆಸಿ ನೀಡಿರುವ ನಡವಳಿಯಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

"ಹಾಜರು ಪಡಿಸಿದ ತಹಸಿಲ್ದಾರರ ನಕ್ಷೆಯ ಪ್ರಕಾರ ವಿಬ್‌ಗಯಾರ್ ಶಾಲೆ ರಸ್ತೆಗೆ ಹೋಗುವ ಎಲ್ಲಾ ಜಮೀನುಗಳಲ್ಲಿ ರಸ್ತೆ ಬಿಟ್ಟು ಉಳಿದ ಜಮೀನನ್ನು ಭೂಮಂಜೂರಾತಿ ಮಾಡಿರುವುದು ಕಂಡುಬರುತ್ತದೆ.ಆದರೆ ಸದರಿ ರಸ್ತೆಯ ಕೆಲವು ಭಾಗಗಳಲ್ಲಿ ಕೆಲವರು ಭೂಮಾಲೀಕರು ರಸ್ತೆ ಡಾಂಬರೀಕರಣ ಮಾಡಲು ಅಡ್ಡಿಪಡಿಸುತ್ತಿದ್ದಾರೆ. ವರ್ತೂರು ರಸ್ತೆಗೆ ಹೊಂದಿಕೊಂಡ ಜಮೀನಿನ ಪ್ರಕರಣದಲ್ಲಿ, ನ್ಯಾಯಲಯದಲ್ಲಿ ತಡೆಯಾಜ್ಞೆ ಇದ್ದು, ಸ್ವತ್ತಿನ ಮಾಲೀಕರ ವಕೀಲರು ಹಾಗೂ ಪಾಲಿಕೆಯ ವಕೀಲರೊಂದಿಗೆ ಕಾನೂನು ಕೋಶದ ಮುಖ್ಯಸ್ಥರು ಸಭೆ ನಡೆಸಿ ರಸ್ತೆ ಡಾಂಬರೀಕರಣಕ್ಕಾಗಿ ಅವಕಾಶ ಮಾಡಿಕೊಡಲು ಕೋರುವಂತೆ ಹಾಗೂ ಒಂದು ವೇಳೆ ನ್ಯಾಯಾಲಯವು ಸದರಿ ಸ್ವತ್ತಿನ ಮಾಲೀಕರ ಪರವಾಗಿ ತೀರ್ಪು ನೀಡಿದ ಪಕ್ಷದಲ್ಲಿ ರಸ್ತೆಗಾಗಿ ಟಿ.ಡಿ.ಆರ್ ಮೂಲಕ ಪರಿಹಾರ ನೀಡುವ ಬಗ್ಗೆ ಒಪ್ಪಂದ ಮಾಡಿಕೊಳ್ಳಲು ಚರ್ಚಿಸಲು ಸೂಚಿಸಲಾಯಿತು".

"ಸದರಿ ರಸ್ತೆಯಲ್ಲಿನ ನ್ಯಾಯಾಲಯದ ತಡೆಯಾಜ್ಞೆ ಇರುವ ಸ್ವತ್ತನ್ನು ಹೊರತುಪಡಿಸಿ ಉಳಿದ ಭಾಗಗಳ ಭೂಮಾಲೀಕರಿಗೆ ತಹಸೀಲ್ದಾರರ ನಕ್ಷೆಯಲ್ಲಿ ರಸ್ತೆ ಬಿಡಬೇಕಾಗಿದೆ. ಕೆಲವು ಭೂಮಾಲೀಕರು ಈ ರಸ್ತೆಯಲ್ಲಿನ ಅಪಾರ್ಟ್‌ಮೆಂಟ್ ಡೆವಲಪರ್‌ಗಳೊಂದಿಗೆ ಒಪ್ಪಂದ ಮಾಡಿಕೊಂಡು ಅನುಮತಿ ಪತ್ರಗಳನ್ನು ನೀಡಿ 40 ಅಡಿ ರಸ್ತೆ ಬಿಟ್ಟುಕೊಟ್ಟಿರುವ ದಾಖಲೆಗಳನ್ನು ಗ್ರಾಮಸ್ಥರು ಹಾಜರುಪಡಿಸಿದರು.ಇವುಗಳನ್ನು ಆಧಾರವಾಗಿಟ್ಟು, ಸದರಿ ಭೂಮಾಲೀಕರಿಗೆ ತಿಳುವಳಿಕೆ ನೀಡಿ ಬಿಎಂ.ಟಿ.ಎಫ್ ಸಹಾಯದೊಂದಿಗೆ ರಸ್ತೆ ಡಾಂಬರೀಕರಣ ಮಾಡಲು ನಿಯಮಾನುಸಾರ ಕ್ರಮ ಜರುಗಿಸಲು ಸೂಚಿಸಲಾಯಿತು".

ಮುಂದುವರೆದು, ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯದ ದಾವೆ ಸಂಖ್ಯೆ:5349/2014 ರಲ್ಲಿ ತೂಬರಹಳ್ಳಿ ಗ್ರಾಮದ ಸರ್ವೇ ನಂ.69ಕ್ಕೆ ಸಂಬಂಧಿಸಿದಂತೆ, ಘನ ನ್ಯಾಯಾಲಯವು ದಿನಾಂಕ:08.09.2016 ರಂದು ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.

"The Suit of the plaintiffs is hereby partly decreed.

The defendants, their officials, sub-ordinates, labourers, legal heirs, representatives, attorneys, legatees and persons are hereby restrained from forming the road over the property that is, suit schedule property, without due process of Law".

ಸದರಿ ಪ್ರದೇಶದಲ್ಲಿನ ಸಾರ್ವಜನಿಕರು ರಸ್ತೆ ನಿರ್ಮಿಸಲು/ಅಗಲಿಕರಣಗೊಳಿಸಲು ಅನೇಕ ಬಾರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಿ ಒತ್ತಾಯ ಪಡಿಸುತ್ತಿರುತ್ತಾರೆ ಹಾಗೂ ರಸ್ತೆಯನ್ನು

ಅಭಿವೃದ್ಧಿಪಡಿಸಲು ತೂಬರಹಳ್ಳಿ ಗ್ರಾಮದ ಸರ್ವೆ ನಂ.69 ಮತ್ತು 70ರ ಭೂಮಾಲೀಕರು ರಸ್ತೆಯನ್ನು ಅಭಿವೃದ್ಧಿಪಡಿಸಲು ವಿರೋಧ ವ್ಯಕ್ತಪಡಿಸುತ್ತಿರುವುದರಿಂದ ಪಾಲಿಕೆಯು ಸದರಿ ಭಾಗದಲ್ಲಿ ರಸ್ತೆಯನ್ನು ನಿರ್ಮಿಸಲು/ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತಿಲ್ಲದೇ ಇರುವುದರಿಂದ, ಸಾರ್ವಜನಿಕರು ಈಗಾಗಲೇ ಅನೇಕ ಬಾರಿ ಪ್ರತಿಭಟನೆಗಳನ್ನು ಸಹ ನಡೆಸಿದ್ದು, ಮಾಧ್ಯಮಗಳಲ್ಲಿಯೂ ಸಹ ರಸ್ತೆ ಸಂಪರ್ಕದ ಅವ್ಯವಸ್ಥೆಯ ಬಗ್ಗೆ ಅನೇಕ ಬಾರಿ ವರದಿಗಳು ಪ್ರಕಟವಾಗಿರುವ ಹಿನ್ನೆಲೆಯಲ್ಲಿ ದಿನಾಂಕ:22/10/2019 ರಂದು ಮಾನ್ಯ ಆಯುಕ್ತರು, ಮಾನ್ಯ ವಿಶೇಷ ಆಯುಕ್ತರು ಹಾಗೂ ಜಂಟಿ ಆಯುಕ್ತರು-ಮಹದೇವಪುರ ವಲಯರವರು ಪರಿವೀಕ್ಷಣೆ ನಡೆಸಿ ರಸ್ತೆ ನಿರ್ಮಾಣ/ಅಗಲೀಕರಣಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುತ್ತಾರೆ.

ಸಾರ್ವಜನಿಕರ ಮತ್ತು ವಾಹನ ಸಂಚಾರದ ಹಿತದೃಷ್ಟಿಯಿಂದ ಸದರಿ ರಸ್ತೆ ನಿರ್ಮಾಣ/ಅಗಲೀಕರಣವು ತುರ್ತು ಅವಶ್ಯವಿರುತ್ತದೆ ಹಾಗೂ ಮಾನ್ಯ ನ್ಯಾಯಾಲಯದ ಆದೇಶದಂತೆ due process of Law ಪ್ರಕಾರ ಸದರಿ ರಸ್ತೆಯನ್ನು ನಿರ್ಮಿಸಲು ನೂತನ ಟಿಡಿಆರ್ ನಿಯಮಾವಳಿ ಅನ್ವಯ ಭೂಸ್ವಾಧೀನ ಕೈಗೊಳ್ಳಲು ನಮೂನೆ-1 ಅಧಿಸೂಚನೆ ಪ್ರಕಟಣೆ ಕೈಗೊಳ್ಳಬೇಕಾಗಿರುತ್ತದೆ ಹಾಗೂ ಪ್ರಸ್ತಾಪಿತ ಸದರಿ ರಸ್ತೆಯನ್ನು 15.00 ಮೀಟರ್ ಅಗಲಕ್ಕೆ ನಿರ್ಮಿಸಲು ಕರಡು ಪರಿಷ್ಕೃತ ಮಹಾನಕ್ಷೆ-2031ರಲ್ಲಿ ಹಳೆ ವಿಮಾನ ನಿಲ್ದಾಣ ರಸ್ತೆಯ ಸರ್ವೇ ನಂ.68 ಮತ್ತು 69 ರಿಂದ ಸರ್ವೆ ನಂ.61/1 ಮತ್ತು 58/2ರ ಮುಖಾಂತರ ಸಾಯಿಬಾಬಾ ದೇವಸ್ಥಾನದ ರಸ್ತೆಗೆ ಸಂಪರ್ಕ ಕಲ್ಪಿಸಲು ಪ್ರಸ್ತಾಪಿಸಲಾಗಿರುತ್ತದೆ.

ಆದರೆ, ಪ್ರಸ್ತಾಪಿತ ಮೇಲ್ಕಂಡ ರಸ್ತೆಯನ್ನು ಸರ್ವೇ ನಂ.61/1 ಮತ್ತು 58/2ರಿಂದ ಮುಂದುವರೆಸಿ 61/2ರ ಮುಖಾಂತರ ಕರಡು ಪರಿಷ್ಕೃತ ಮಹಾನಕ್ಷೆ-2031ರಲ್ಲಿ 30.00 ಮೀಟರ್ ಅಗಲಕ್ಕೆ ಪ್ರಸ್ತಾಪಿಸಿರುವ ತೂಬರಹಳ್ಳಿ ಎಕ್ಸ್‌ಟೆನ್ಸನ್ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸಲು ಉದ್ದೇಶಿಸಲಾಗಿದೆ.

ಸದರಿ ಉದ್ದೇಶಿತ ರಸ್ತೆಯು 1180.50 ಮೀಟರ್ ಉದ್ದವಿದ್ದು ಹಾಲಿ 20 ರಿಂದ 25 ಅಡಿಗಳ ಅಗಲವಿರುತ್ತದೆ. ಸದರಿ ರಸ್ತೆಯಲ್ಲಿನ ಸರ್ವೆ ನಂ.63/2, 62, 61/1ರ ಸ್ವತ್ತುಗಳ ಪ್ರದೇಶದಲ್ಲಿ 12.00 ಮೀಟರ್ ಅಗಲಕ್ಕೆ Relinquishment Deed ಆಗಿದ್ದು, ಕರಡು ಪರಿಷ್ಕೃತ ಮಹಾನಕ್ಷೆ-2031ರಲ್ಲಿ 15.00 ಮೀಟರ್ ಅಗಲಕ್ಕೆ ಪ್ರಸ್ತಾಪಿಸಿರುವುದರಿಂದ ಸರ್ವೆನಂ.63/2,62, 61/1ರ ಸ್ವತ್ತುಗಳಲ್ಲಿ ಹೆಚ್ಚುವರಿಯಾಗಿ ಅಂದರೆ 3.00 ಮೀಟರ್ ಅಗಲೀಕರಣಕ್ಕೆ ಟಿ.ಡಿ.ಆರ್ ವಿತರಿಸಬೇಕಾಗುತ್ತದೆ.

ಉದ್ದೇಶಿತ ರಸ್ತೆಯು ಪರಿಷ್ಕೃತ ಮಹಾನಕ್ಷೆ-2015ರಲ್ಲಿ ರಸ್ತೆ ನಿರ್ಮಾಣಕ್ಕೆ/ ಅಗಲೀಕರಣಕ್ಕೆ ಪ್ರಸ್ತಾಪಿಸಿಲ್ಲದೇ ಇರುವುದರಿಂದ ಸದರಿ ರಸ್ತೆಯ ನಿರ್ಮಾಣ/ ಅಗಲೀಕರಣವನ್ನು ಕೈಗೊಳ್ಳಬೇಕಾದಲ್ಲಿ ನೂತನ ಟಿ.ಡಿ.ಆರ್ ನಿಯಮಾವಳಿ ಅಧಿಸೂಚನೆ ಸಂಖ್ಯೆ: UDD 283 BEMRUPRA 2015, Bangalore, Dt.04/03/2017ರ ರೂಲ್ ನಂ.3ರಲ್ಲಿ ಈ ಕೆಳಕಂಡಂತೆ ಅವಕಾಶ ಕಲ್ಪಿಸಲಾಗಿರುತ್ತದೆ.

"Notifying 'Area' for public purpose:-(1) Ina Local planning Area listed at Appendix-1 if any public Authority requires any Area for public purpose, it shall notify the same in Form-1 stating the facts of the Area required by the authority specifying the limits of the Area along with the statement specifying the land which is required to be acquired in lieu of compensation under the right to fair compensation and Transparency in Land Acquisition, Rehabilitation and Resettlement Act, 2013 (Central Act 30 of 2013) and entitled to be granted Development Rights in the Official gazette and in one or more news papers circulating within the Local Planning Area as the Public Authority deems fit"

ಮೇಲ್ಕಂಡ ನಿಯಮಾವಳಿಯಂತೆ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕವಿರುವ ಖಾಸಗಿ ಸ್ವತ್ತನ್ನು ಟಿ.ಡಿ.ಆರ್ ಮೂಲಕ ಸ್ವಾಧೀನ ಪಡಿಸಿಕೊಳ್ಳಲು ನಮೂನೆ-1 ಅಧಿಸೂಚನೆ ಪ್ರಕಟಿಸಲು ನಗರಯೋಜನೆ ಮತ್ತು

ಅಭಿವೃದ್ಧಿಸ್ಥಾಯಿ ಸಮಿತಿ ಹಾಗೂ ಪಾಲಿಕೆ ಕೌನ್ಸಿಲ್ ಸಭೆಯ ಅನುಮೋದನೆ ಪಡೆದು ಸರ್ಕಾರದ ಸ್ಥಿರೀಕರಣ ಅನುಮೋದನೆ ಪಡೆಯಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತಾಪಿತ ರಸ್ತೆಯನ್ನು ಕರಡು ಪರಿಷ್ಕೃತ ಮಹಾನಕ್ಷೆ-2031ರಲ್ಲಿ ಪ್ರಸ್ತಾಪಿಸಿರುವಂತೆ 15.00 ಮೀಟರ್ ಅಗಲಕ್ಕೆ ನಿರ್ಮಿಸಲು/ ಅಗಲೀಕರಣಗೊಳಿಸಲು ಅವಶ್ಯವಿರುವ ಖಾಸಗಿ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳಲು Alignment Drawing ಅನ್ವಯ ಮೋಜಣಿದಾರರಿಂದ ನಕ್ಷೆಯಲ್ಲಿ ತೋರಿಸಿರುವಂತೆ ಸ್ವತ್ತುಗಳನ್ನು ಗುರುತಿಸಲಾಗಿರುತ್ತದೆ. 15.00 ಮೀಟರ್‌ಗಳಿಗೆ ನಿರ್ಮಿಸಲು/ಅಗಲೀಕರಣಗೊಳಿಸಲು ಈಗಾಗಲೇ Relinquishment ಮಾಡಿರುವ ಸ್ಥಳವನ್ನು ಹಾಗೂ ಹಾಲಿ ಇರುವ ರಸ್ತೆಯ ಭಾಗವನ್ನು ಹೊರತುಪಡಿಸಿ, ಸುಮಾರು ಒಟ್ಟು 9023.75 ಚ.ಮೀ ಭೂಸ್ವಾಧೀನ ಅವಶ್ಯವಿದ್ದು, ಸರ್ವೆ ನಂಬರುವಾರು ಖಾಸಗಿ ಜಾಗದ/ಕಟ್ಟಡಗಳ ಮಾಲೀಕರ ವಿವರಗಳು ಕೆಳಕಂಡಂತೆ ಇವೆ.

Sl. No	Name of the District	Name of the Taluk	Name of the Village	Sy.no. /Khata no	Type of land	Nature of land	Area (in sqm)	Name and address of the Land owner / interested persons
1	Bangalore Urban	Bangalore East	Thubarahalli	69	Private Property	Vacant Land	501.55	Smt. Pullamma W/o late Muniyappa
2	Bangalore Urban	Bangalore East	Thubarahalli	68	Private Property	Vacant Land	1098.94	Sri. Munishami S/o Motappa and Others
3	Bangalore Urban	Bangalore East	Thubarahalli	70	Private Property	Vacant Land	1015.92	Sri. Pullappa S/o Perumappa and Others
4	Bangalore Urban	Bangalore East	Thubarahalli	67	Private Property	Vacant Land	895.52	Sri. M YashavanthaShenai S/o H. VishwanathShanai and Others
5	Bangalore Urban	Bangalore East	Thubarahalli	71	Private Property	Vacant Land/ Building	1487.37	Sri. A. Ramakrishna S/o Anjaneyachar and Others
6	Bangalore Urban	Bangalore East	Thubarahalli	66/2	Private Property	Vacant Land/ Building	21.88	Sri. N Govinda Reddy
7	Bangalore Urban	Bangalore East	Thubarahalli	66/3	Private Property	Vacant Land	87.93	Sri. N Govinda Reddy
8	Bangalore Urban	Bangalore East	Thubarahalli	65/1	Private Property	Vacant Land/ Building	269.41	Smt. Kavithamalaani W/o Late Suresh V. Malani
9	Bangalore Urban	Bangalore East	Thubarahalli	65/2	Private Property	Vacant Land	403.98	Smt. Kavithamalaani W/o Late Suresh V. Malani and Others
10	Bangalore Urban	Bangalore East	Thubarahalli	65/3	Private Property	Vacant Land	530.26	Smt. Kavithamalaani W/o Late Suresh V. Malani and Others
11	Bangalore Urban	Bangalore East	Thubarahalli	58/3	Private Property	Vacant Land	97.53	Sri. R. Gurureddy S/o Ramaiah Reddy
12	Bangalore Urban	Bangalore East	Thubarahalli	63/2	Private Property	Vacant Land	277.97	SavithaNagpal D/o Avinash Chand
13	Bangalore Urban	Bangalore East	Thubarahalli	62	Private Property	Vacant Land	198.13	SavithaNagpal D/o Avinash Chand & Others
14	Bangalore Urban	Bangalore East	Thubarahalli	58/1	Private Property	Vacant Land	249.97	M Chandra Reddy & Others
15	Bangalore Urban	Bangalore East	Thubarahalli	58/2	Private Property	Vacant Land/ Building	164.31	B. Venkatappa Reddy & Others
16	Bangalore Urban	Bangalore East	Thubarahalli	61/1	Private Property	Vacant Land	198.34	K Anilkumar Reddy S/o K.Srinivas Reddy & Others

17	Bangalore Urban	Bangalore East	Thubarahalli	61/2	Private Property	Vacant Land	1524.74	Sri. Srinivasa Reddy & Others
TOTAL AREA In Sqmt							**9023.75**	

ಹಳೆ ವಿಮಾನ ನಿಲ್ದಾಣ ರಸ್ತೆಯಿಂದ ವಿಬ್‌ಗಯಾರ್ ಶಾಲೆ ಮೂಲಕ ತೂಬರಹಳ್ಳಿ ಎಕ್ಸ್‌ಟೆನ್ಷನ್‌ಗೆ ಸೇರುವರಸ್ತೆಯ ನಿರ್ಮಾಣ/ಅಗಲೀಕರಣಕ್ಕೆ (ಸಾರ್ವಜನಿಕ ಉಪಯೋಗಕ್ಕೆ) ಅವಶ್ಯಕವಿರುವ ಮೇಲ್ಕಂಡ ಖಾಸಗಿ ಸ್ವತ್ತುಗಳನ್ನು ನೂತನ ಟಿ.ಡಿ.ಆರ್ ನಿಯಮಾವಳಿ ಮೂಲಕ ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿ ಉಲ್ಲೇಖ (2) ರ ನಮೂನೆ-1 ಅಧಿಸೂಚನೆ ಸಂಖ್ಯೆ:ಬಿಬಿಎಂಪಿ/ಆಯುಕ್ತರು/ಪಿಎಸ್‌ಆರ್ (ಜಿ)/5801-2019-20 ದಿನಾಂಕ: 27-11-2019 ರಂತೆ ಟಿಡಿಆರ್ ನಮೂನೆ-1 ಅಧಿಸೂಚನೆ ಪ್ರಕಟಿಸಿರುವ ಕ್ರಮಕ್ಕೆ ಸ್ಥಿರೀಕರಣ ಅನುಮೋದನೆಗಾಗಿ ಮಂಡಿಸಿರುವ **ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ 20-02-2020ರ ಟಿಪ್ಪಣಿಯನ್ನು ಒಪ್ಪಿ, ದಿನಾಂಕ:10-03-2020ರಂದು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯಕ್ಕೆ ಸಂಬಂಧಿಸಿದಂತೆ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಟಿಪ್ಪಣಿ.**

ತೀರ್ಮಾನ: ಉಪ ಆಯುಕ್ತರು (ಭೂಸ್ವಾಧೀನ) ರವರೊಂದಿಗೆ ಚರ್ಚಿಸಲಾಯಿತು. ಟಿಪ್ಪಣಿಯನ್ನು ಸಲ್ಲಿಸಿದ ನಂತರ ಕೆಲವು ಪ್ರಕರಣಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮುಂದುವರೆಸಿ ಮುಕ್ತಾಯಗೊಳಿಸಿರುವುದಾಗಿ ತಿಳಿಸಿದರು. ಈಗಿನ ವಸ್ತುಸ್ಥಿತಿ ಮತ್ತು ಭೂಸ್ವಾಧೀನಕ್ಕೆ ತಗುಲುವ ವೆಚ್ಚವನ್ನು ಹಾಗೂ ಭರಿಸುವ ಸಂಪನ್ಮೂಲಗಳ ಲಭ್ಯತೆ ಕುರಿತು ಮರುಪರಿಶೀಲಿಸಿ, ಪೂರಕ ಟಿಪ್ಪಣಿಯನ್ನು ಆಯುಕ್ತರ ಮೂಲಕ ಮರುಮಂಡಿಸಲು ಸೂಚಿಸಿದೆ.

(ಗೌರವ ಗುಪ್ತ)
ಆಡಳಿತಗಾರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:26/09/2020ರ ನಡವಳಿಗಳು

ವಿಷಯದ ಸಂಖ್ಯೆ: 10(119)/2020-21

ಪ್ರಸ್ತಾವನೆ:-

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾನ್ಯ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 24739/2012 ರ ದಿನಾಂಕ: 17-12-2015 ರಲ್ಲಿ ನಡೆದ ವಿಚಾರಣೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಕಡ್ಡಾಯವಾಗಿ ಹಸಿ, ಒಣ ಮತ್ತು ಜೈವಿಕ ಹಾಗೂ ಸ್ಯಾನಿಟರಿ ತ್ಯಾಜ್ಯವನ್ನಾಗಿ ವಿಂಗಡಿಸಿ ಸಂಸ್ಕರಿಸಲು ಸೂಚಿಸಲಾಗಿರುತ್ತದೆ. ಇದರ ಅನ್ವಯ ವಿಂಗಡಿಸಿದ ಹಸಿ ಮತ್ತು ಒಣತ್ಯಾಜ್ಯವನ್ನು ಸಂಸ್ಕರಣೆ ಅಥವಾ ವಿಲೇವಾರಿ ಮಾಡಲು ಘಟಕಗಳಿದ್ದು, ಜೈವಿಕ ಮತ್ತು ಸ್ಯಾನಿಟರಿ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಾಣಿಕೆ ಮಾಡಿ ಸಂಸ್ಕರಣೆ ಮಾಡುವುದು ಕಡ್ಡಾಯವಾಗಿರುತ್ತದೆ.

ಇದಲ್ಲದೇ, ಘನತ್ಯಾಜ್ಯ ನಿರ್ವಹಣೆ ನಿಯಮ-2016 ರಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ತ್ಯಾಜ್ಯವನ್ನು 3 ಬಗೆಯ ಹಸಿ, ಒಣ ಮತ್ತು ಜೈವಿಕ ಹಾಗೂ ಸ್ಯಾನಿಟರಿ ತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸಿ ಪ್ರತ್ಯೇಕವಾಗಿ ಸಂಸ್ಕರಿಸಿ ವಿಲೇವಾರಿ ಮಾಡುವುದು ಅತ್ಯವಶ್ಯವಾಗಿರುತ್ತದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಅಧಿಕೃತಗೊಂಡಿರುವ (Authorization) ಗೃಹ ಜೈವಿಕ ತ್ಯಾಜ್ಯ ವಿಲೇವಾರಿ ಮಾಡುವ ಸಂಸ್ಥೆಗಳಿಂದ ಪಾಲಿಕೆಯ ಕೆಲವು ವಲಯಗಳಲ್ಲಿ ಪ್ರಾಯೋಗಿಕವಾಗಿ ಗೃಹ ಜೈವಿಕ ಮತ್ತು ಸ್ಯಾನಿಟರಿ ತ್ಯಾಜ್ಯವನ್ನು ವಿಲೇವಾರಿ ಹಾಗೂ ಸಂಸ್ಕರಣೆ ಮಾಡಲು ನಿರ್ಧರಿಸಲಾಯಿತು(ಮೂರು ತಿಂಗಳ ಅವಧಿಗೆ ಪ್ರಾಯೋಗಿಕವಾಗಿರುವುದರಿಂದ ಯಾವುದೇ ಶುಲ್ಕವಿಲ್ಲದೇ ಉಚಿತವಾಗಿ ಸೇವೆ ಒದಗಿಸುವಂತೆ ಪಾಲಿಕೆಯ ಕೋರಿಕೆಯನ್ನು ಸಂಸ್ಥೆಗಳು ಒಪ್ಪಿದ ಮೇರೆಗೆ). ಅದರಂತೆ ಮನೆ ಮನೆ ತ್ಯಾಜ್ಯ ಸಂಗ್ರಹಿಸುವ ಗುತ್ತಿಗೆದಾರರಿಂದ ಹಸಿ ತ್ಯಾಜ್ಯದೊಂದಿಗೆ ಗೃಹ ಜೈವಿಕ ಮತ್ತು ಸ್ಯಾನಿಟರಿ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರ/ಸೂಕ್ತ ಸ್ಥಳಗಳಲ್ಲಿ ಪ್ರತ್ಯೇಕವಾಗಿ ಶೇಖರಿಸಿ, ವಿಲೇವಾರಿ ಮಾಡಲಾಗುತ್ತಿದ್ದು, ಪ್ರತಿದಿನ ಗೃಹ ಜೈವಿಕ ಮತ್ತು ಸ್ಯಾನಿಟರಿ ತ್ಯಾಜ್ಯ ಉತ್ಪಾದನೆಯನ್ನು ಹಾಲಿ ಹಸಿತ್ಯಾಜ್ಯ ಮತ್ತು ಸ್ಯಾನಿಟರಿ ತ್ಯಾಜ್ಯವನ್ನು ಸಂಗ್ರಹಣೆ ಮಾಡಿ ವಿಲೇವಾರಿ ಮಾಡಲು ಕರೆದಿರುವ ನೂತನ ಟೆಂಡರ್‌ನಲ್ಲಿ ಮೈಕ್ರೋಪ್ಲಾನ್‌ನಂತೆ ಪಾಲಿಕೆಯಲ್ಲಿ ಒಟ್ಟು ಉತ್ಪಾದನೆಯಾಗುವ ಘನತ್ಯಾಜ್ಯ ಪ್ರಮಾಣದ ಶೇ 1 ರಷ್ಟು ಪರಿಗಣಿಸಿ ವಲಯವಾರು ಪ್ಯಾಕೇಜ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಅದರಂತೆ ಪೂರ್ವ ವಲಯದಲ್ಲಿ ಒಟ್ಟು ಗೃಹ ಜೈವಿಕ ಮತ್ತು ಸ್ಯಾನಿಟರಿ ತ್ಯಾಜ್ಯ ಉತ್ಪಾದನೆಯು 6.08 ಟನ್‌ಗಳೆಂದು ಅಂದಾಜಿಸಲಾಗಿರುತ್ತದೆ.

ಇದಲ್ಲದೆ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರ/ಸೂಕ್ತ ಸ್ಥಳಗಳಲ್ಲಿ ಗೃಹ ಜೈವಿಕ ಮತ್ತು ಸ್ಯಾನಿಟರಿ ತ್ಯಾಜ್ಯವನ್ನು ಪ್ರತ್ಯೇಕವಾಗಿ ಶೇಖರಿಸಿ, ಇಂತಹ ಸಂಗ್ರಹಿಸಿದ ಗೃಹ ಜೈವಿಕ ಮತ್ತು ಸ್ಯಾನಿಟರಿ ತ್ಯಾಜ್ಯವನ್ನು ಸಾಗಾಣಿಕೆ ಮಾಡಿ ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಕಾರ್ಯಕ್ಕಾಗಿ EOI (Expression of Interest) ಮುಖಾಂತರ ದರಗಳ ಅನುಮೋದನೆ ಪಡೆಯಲಾಗಿರುತ್ತದೆ.

ಮುಂದುವರೆದಂತೆ, EOI ಮುಖಾಂತರ ಅನುಮೋದನೆ ನೀಡಲಾಗಿರುವ ದರಗಳನ್ವಯ ವಲಯವಾರು ವಾರ್ಷಿಕವಾಗಿ ವೆಚ್ಚವಾಗಬಹುದಾದ ಮೊತ್ತ ಈ ಕೆಳಕಂಡಂತಿರುತ್ತದೆ.

ಕ್ರಮ ಸಂಖ್ಯೆ	ವಲಯ	ಪ್ರತಿದಿನ ಗೃಹ ಜೈವಿಕ ಮತ್ತು ಸ್ಯಾನಿಟರಿ ತ್ಯಾಜ್ಯಉತ್ಪಾದನೆ ಟನ್‌ಗಳಲ್ಲಿ	ಪ್ರತಿದಿನ ಮೊತ್ತ ರೂ.ಗಳಲ್ಲಿ	ಮಾಹೆಯಾನಮೊತ್ತ ರೂ.ಲಕ್ಷಗಳಲ್ಲಿ	ವಾರ್ಷಿಕ ಮೊತ್ತ ರೂ.ಲಕ್ಷಗಳಲ್ಲಿ
2	ಪೂರ್ವ	6.08	106578.89	31.97	**389.01**

ಇದರಿಂದ ಪಾಲಿಕೆಗೆ ಮಾಹೆಯಾನ ಅಂದಾಜು 31.97 ಲಕ್ಷ ರೂಗಳು ವೆಚ್ಚವಾಗಲಿದ್ದು, ಒಟ್ಟಾರೆ ವರ್ಷಕ್ಕೆ ರೂ. 3.89 ಕೋಟಿ ವೆಚ್ಚವಾಗಬಹುದೆಂದು ಅಂದಾಜಿಸಲಾಗಿದ್ದು, ಈಗಾಗಲೇ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೇರ್ಷಿಕೆ ಪಿ–0274 ಸ್ವಚ್ಛತೆ ಮತ್ತು ಕಸ ಸಾಗಾಣಿಕೆ ಅಡಿಯಲ್ಲಿ ರೂ. 380.00 ಕೋಟಿ ರೂಗಳನ್ನು ಒದಗಿಸಲಾಗಿದ್ದು, ಸದರಿ ಕಾಮಗಾರಿಯು ಗೃಹ ಜೈವಿಕ ಮತ್ತು ಸ್ಯಾನಿಟರಿ ತ್ಯಾಜ್ಯ ಸಾಗಾಣಿಕೆ ಮತ್ತು ಸಂಸ್ಕರಣೆ ಹಾಗೂ ವಿಲೇವಾರಿಗೆ ಸಂಬಂಧಿಸಿರುವುದರಿಂದ ಸದರಿ ಲೆಕ್ಕ ಶೀರ್ಷಿಕೆಯಡಿಯಲ್ಲಿಯೇ ಭರಿಸಬಹುದಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಪ್ರತಿ ದಿನ ಸುಮಾರು 35.99 ಟನ್ ಗೃಹ ಜೈವಿಕ ಮತ್ತು ಸ್ಯಾನಿಟರಿ ತ್ಯಾಜ್ಯ ಸಂಸ್ಕರಣೆ ಮಾಡಲು ವಲಯವಾರು ವಾರ್ಷಿಕ ಅವಶ್ಯವಿರುವ ಮೊತ್ತ ಈ ಕೆಳಕಂಡಂತ್ತಿದ್ದು, ವಲಯಕ್ಕೊಂದು ಪ್ಯಾಕೇಜ್‌ನಂತೆ 8 ಪ್ಯಾಕೇಜುಗಳನ್ನಾಗಿಸಿದೆ.

ಕ್ರಮ ಸಂಖ್ಯೆ	ವಲಯ	ವಾರ್ಷಿಕ ಮೊತ್ತ ರೂ.ಲಕ್ಷಗಳಲ್ಲಿ
1	ಪೂರ್ವ	**389.01**

ಸದರಿ ಪ್ಯಾಕೇಜಿಗೆ ಒಟ್ಟಾರೆ ಅಂದಾಜು ಮೊತ್ತ ರೂ. 3.89 ಕೋಟಿಗಳಿಗೆ ಪಾಲಿಕೆಯ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ, ಗೃಹ ಜೈವಿಕ ತ್ಯಾಜ್ಯ ವಿಲೇವಾರಿ ಮತ್ತು ಸಂಸ್ಕರಣೆ ಮಾಡಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಅಧಿಕೃತಗೊಂಡಿರುವ (Authorization) ಸಂಸ್ಥೆಗಳಿಂದ ವಲಯವಾರು ಒಂದು ವರ್ಷದ ಅವಧಿಗೆ ದಿನಾಂಕ:15.05.2019 ರಂದು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ

ಟೆಂಡರ್‌ನ ತಿದ್ದುಪಡಿ ಅಂಶಗಳನ್ನು ಅನುಮೋದನೆ ಪಡೆಯುವಲ್ಲಿ ವಿಳಂಭ ಮತ್ತು ಟೆಂಡರ್ ದಿನಾಂಕವನ್ನು ಮುಂದೂಡಲಾಗದ ಕಾರಣ ತಿದ್ದುಪಡಿ ಅಂಶಗಳನ್ನೊಳಗೊಂಡಂತೆ ಅಲ್ಪಾವಧಿ ಮರುಟೆಂಡರ್ ಅನ್ನು ದಿನಾಂಕ:16.10.2019 ರಂದು ಆಹ್ವಾನಿಸಲಾಗಿರುತ್ತದೆ.

ಈ ಪ್ಯಾಕೇಜಿಗೆ 1 ಬಿಡ್ ಸ್ವೀಕೃತವಾಗಿದ್ದು, ಸದರಿ ಬಿಡ್ ತಾಂತ್ರಿಕವಾಗಿ ಅರ್ಹವಾಗಿದ್ದು, ಇದರ ಹಣಕಾಸಿನ ಬಿಡ್‌ನ್ನು ತೆರೆಯಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತವೆ.

Package No	Zone	Technically Qualified Bidders	Financial Bids		% Above	L1/L2
			Estmated in Rs. Per Kg	Bid Amount in Rs. Per Kg		
1	East	V V INCIN Solutions Pvt Ltd	17.53	20.00	14.09	L1

ತದನಂತರ ದರ ಸಂಧಾನದ ಮೂಲಕ ಈ ಕೆಳಕಂಡಂತೆ ದರಗಳನ್ನು ಅಂತಿಮಗೊಳಿಸಲಾಗಿದೆ. ಅದರಂತೆ ಪ್ಯಾಕೇಜ್‌ವಾರು ದರಗಳು ಮತ್ತು ವೆಚ್ಚವಾಗಬಹುದಾದ ವಾರ್ಷಿಕ ಮೊತ್ತದ ವಿವರಗಳು ಈ ಕೆಳಕಂಡಂತಿರುತ್ತವೆ.

Package No	Zone	Technically Qualified Bidders	Financial Bids		Negotiated Amount in Rs. Per Kg	Estimated quantity of generation in Kgs Per Day	Financial Costs		% above
			Estmated in Rs. Per Kg	Bid Amount in Rs. Per Kg			Estmated in Rs Lakhs Per Annum	Negotiated in Rs Lakhs Per Annum	
1	East	V V INCIN Solutions Pvt Ltd	17.53	20.00	18.00	6080.00	389.03	399.46	2.68

ಮೇಲಿನ ಎಲ್ಲಾ ಅಂಶಗಳು ಮತ್ತು ಕೋವಿಡ್-19 ರ ಹಿನ್ನಲೆಯಲ್ಲಿ ಈಗಾಗಲೇ ಮಾಸ್ಕಗಳು ಗೌಸ್ ಮತ್ತಿತರ ಗೃಹ ಜೈವಿಕ ಮತ್ತು ಸ್ಯಾನಿಟರಿ ತ್ಯಾಜ್ಯದ ಉತ್ಪಾದನೆ ಹೆಚ್ಚಾಗಿದ್ದು, ಇವುಗಳ ವೈಜ್ಞಾನಿಕ ವಿಲೇವಾರಿ ಕಾರ್ಯವು ಅತ್ಯವಶ್ಯಕ ಮತ್ತು ಕೋವಿಡ್ ಕಾಯಿಲೆಯನ್ನು ಹರಡದಂತೆ ಸಹಕಾರಿಯಾಗಲಿರುವ ಹಿನ್ನಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

1. ಈಗಾಗಲೇ ಅಲ್ಪಾವಧಿ ಟೆಂಡರ್‌ಗೆ ಅಂದಾಜಿಸಿರುವ ಮೊತ್ತಕ್ಕೆ ಘಟನೋತ್ತರ ಆಡಳಿತಾತ್ಮಕ ಅನುಮೋದನೆ
2. ಈಗಾಗಲೇ ಅಲ್ಪಾವಧಿ ಟೆಂಡರ್ ಹಾಗೂ ಅಲ್ಪಾವಧಿ ಮರು ಕರೆದಿರುವ ಕಾರ್ಯಕ್ಕೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಘಟನೋತ್ತರ ಅನುಮೋದನೆ ಮತ್ತು ಸ್ಥಿರೀಕರಣ
3. ಪೂರ್ವ ವಲಯದ ಟೆಂಡರ್‌ನಲ್ಲಿ ದರ ಸಂಧಾನದ ದರಗಳನ್ನು ಹಾಗೂ ವಾರ್ಷಿಕ ವೆಚ್ಚ ರೂ. 3.99 ಕೋಟಿ ಗಳ ವೆಚ್ಚದ ಟೆಂಡರ್‌ಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಹಾಗೂ ಪಾಲಿಕೆ ಸಭೆಯ ಅನುಮೋದನೆ

4. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಪಿ-0274 ಸ್ವಚ್ಛತೆ ಮತ್ತು ಕಸ ಸಾಗಾಣಿಕೆ ಅಡಿಯಲ್ಲಿ ರೂ. 380.00 ಕೋಟಿ ರೂಗಳನ್ನು ಒದಗಿಸಲಾಗಿದ್ದು, ಸದರಿ ಕಾಮಗಾರಿಯು ಗೃಹ ಜೈವಿಕ ಮತ್ತು ಸ್ಯಾನಿಟರಿ ತ್ಯಾಜ್ಯ ಸಾಗಾಣಿಕೆ ಮತ್ತು ಸಂಸ್ಕರಣೆ ಹಾಗೂ ವಿಲೇವಾರಿಗೆ ಸಂಬಂಧಿಸಿರುವುದರಿಂದ ಸದರಿ ಲೆಕ್ಕ ಶೀರ್ಷಿಕೆಯಡಿಯಲ್ಲಿಯೇ ಭರಿಸಲು ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿರುವ ವಿಶೇಷ ಆಯುಕ್ತರು (ಘ.ತ್ಯಾ.ನಿ) ರವರ ದಿನಾಂಕ:26.05.2020ರ ಟಿಪ್ಪಣಿಯನ್ನು ಒಪ್ಪಿ, ದಿನಾಂಕ:18-06-2020ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕೆ ಸಂಬಂಧಿಸಿದಂತೆ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದ ಮಂಡಿಸಿರುವ ಟಿಪ್ಪಣಿ.

ತೀರ್ಮಾನ: ವಿಶೇಷ ಆಯುಕ್ತರು (ಘ.ತ್ಯಾ.ನಿ) ರವರ ದಿನಾಂಕ: 26/05/2020ರ ಟಿಪ್ಪಣಿಯನ್ನು ಒಪ್ಪಿದೆ.

26/9/2020

(ಗೌರವ್ ಗುಪ್ತ)
ಆಡಳಿತಗಾರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:26/09/2020ರ ನಡವಳಿಗಳು

ವಿಷಯದ ಸಂಖ್ಯೆ: 12(150)/2020-21

ಪ್ರಸ್ತಾವನೆ:-

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ಪೌರ ನಿಗಮಗಳ ಕಾಯ್ದೆ 1976 ಕಲಂ 108 (ಎ) (16) ರ ಅನುಸಾರ ಪ್ರದೇಶವಾರು ಯೂನಿಟ್ ದರಗಳ ಆಧಾರದ ಮೇಲೆ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯನ್ನು ದಿನಾಂಕ: 1-4-2008 ರಿಂದ ಜಾರಿಗೆ ತರಲಾಗಿರುವುದು ಸರಿಯಷ್ಟೆ.

ಸದರಿ ಕಾಯ್ದೆ ಅನ್ವಯ ಪ್ರತಿ ಮೂರು ವರ್ಷಗಳಿಗೊಮ್ಮೆ ಕನಿಷ್ಠ ಶೇಕಡ 15 ರಷ್ಟು ಹಾಗೂ ಗರಿಷ್ಠ ಶೇಕಡ 30 ರಷ್ಟು ಆಸ್ತಿ ತೆರಿಗೆ ಪ್ರದೇಶವಾರು ಯೂನಿಟ್ ದರಗಳನ್ನು ಪರಿಷ್ಕರಣೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಮೊದಲನೇ ಆಸ್ತಿ ತೆರಿಗೆ ಬ್ಲಾಕ್‌ನ ಮೂರು ವರ್ಷಗಳ ಅವಧಿಯು ದಿನಾಂಕ : 31-3-2011ಕ್ಕೆ ಮುಕ್ತಾಯಗೊಳ್ಳಲಿದ್ದ ಹಿನ್ನಲೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ದರಗಳ ಮೇಲೆ ವಸತಿ ಉಪಯೋಗದ ಸ್ವತ್ತುಗಳಿಗೆ ಶೇಕಡ 20 ರಂತೆ ಮತ್ತು ವಸತಿಯೇತರ ಸ್ವತ್ತುಗಳಿಗೆ ಶೇಕಡ 25 ರಂತೆ ದರಗಳನ್ನು ಪರಿಷ್ಕರಿಸುವಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ದಿನಾಂಕ : 18-3-2011ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ : 266 / 2010-11 ರಲ್ಲಿ ಈ ಕೆಳಕಂಡಂತೆ ನಿರ್ಣಯಿಸಿರುತ್ತಾರೆ.

> **"ಕೆ.ಎಂ.ಸಿ ಕಾಯ್ದೆ 108 (ಎ) (16) ರ ಅನುಸಾರ ಪ್ರತಿ ಮೂರು ವರ್ಷಗಳಿಗೊಮ್ಮೆ ಕನಿಷ್ಠ ಶೇಕಡ 15 ರಷ್ಟು ಹಾಗೂ ಗರಿಷ್ಠ ಶೇಕಡ 30 ರಷ್ಟು ಆಸ್ತಿ ತೆರಿಗೆ ಪರಿಷ್ಕರಣೆ ಮಾಡಲು ಪಾಲಿಕೆಗೆ ಅವಕಾಶ ಕಲ್ಪಿಸಲಾಗಿದೆ. ಕಾಯ್ದೆ ಪ್ರಕಾರ ಎಸ್.ಎ.ಎಸ್ ಪದ್ಧತಿಯನ್ನು 2008-2009 ನೇ ಸಾಲಿನಲ್ಲಿ ಜಾರಿಗೆ ತಂದಿದ್ದು, ಈ ಬ್ಲಾಕ್ ಅವಧಿಯು ದಿನಾಂಕ : 1-4-2011 ರಿಂದ ಪ್ರಾರಂಭಗೊಳ್ಳಲಿರುವುದರಿಂದ ಕಾಯ್ದೆ ಪ್ರಕಾರ ವಸತಿ ಉಪಯೋಗದ ಆಸ್ತಿಗಳಿಗೆ ಶೇಕಡ 20 ರಷ್ಟನ್ನು ವಸತಿಯೇತರ ಕಟ್ಟಡಗಳಿಗೆ ಶೇಕಡ 25 ರಷ್ಟನ್ನು ದಿನಾಂಕ : 1-4-2011 ರಿಂದ ಪರಿಷ್ಕರಣೆ ಮಾಡಲು ಆಯುಕ್ತರು ದಿನಾಂಕ : 11-3-2011 ರಂದು ಟಿಪ್ಪಣಿ ಮಂಡಿಸಿರುತ್ತಾರೆ.**
>
> **ಸಾರ್ವಜನಿಕರು, ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಜನಪ್ರತಿನಿಧಿಗಳು ಮುಂದುವರೆದ ಬ್ಲಾಕ್ ಅವಧಿಯಲ್ಲಿ ಆಸ್ತಿ ತೆರಿಗೆಯಲ್ಲಿ ಯಾವುದೇ ಪರಿಷ್ಕರಣೆ ಮಾಡಬಾರದೆಂದು ಒತ್ತಾಯಿಸಿರುತ್ತಾರೆ.**
>
> **ಈ ಬ್ಲಾಕ್ ಅವಧಿಯಲ್ಲಿ ಶೇಕಡ 3 ರಷ್ಟನ್ನು ಕಟ್ಟಡ ಸವಕಳಿಗಾಗಿ ನೀಡಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ : 1-4-2008 ರಿಂದ ಪ್ರಾರಂಭವಾದ ಈಗಿರುವ ಬ್ಲಾಕ್ ಅವಧಿಯನ್ನು 3 ವರ್ಷಗಳಿಂದ 5 ವರ್ಷಗಳಿಗೆ ಹೆಚ್ಚಿಸಿ, ಅಂದರೆ ಮುಂದಿನ ಎರಡು ವರ್ಷಗಳಿಗೆ (ದಿನಾಂಕ : 1-4-2011 ರಿಂದ 30-3-2013ಕ್ಕೆ) ಹಾಲಿ ಇರುವ ದರವನ್ನೇ ವಸತಿ ಮತ್ತು ವಸತಿಯೇತರ ಕಟ್ಟಡಗಳಿಗೆ ಮುಂದುವರೆಸಲು ಹಾಗೂ ಯಾವುದೇ ಕಟ್ಟಡದ ವಯಸ್ಸಿನ ಸವಕಳಿಯನ್ನು ಈ ಮುಂದುವರೆದ ಅವಧಿಗೆ ವಿಸ್ತರಿಸದಿರಲು ಈ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿ, ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲು ಸರ್ಕಾರವನ್ನು ಕೋರುವ ಬಗ್ಗೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. "**

ನಗರ ಪಾಲಿಕೆಯ ನಿರ್ಣಯಕ್ಕೆ ಸೂಕ್ತ ತಿದ್ದುಪಡಿ ತರಲು ಸರ್ಕಾರದ ಅನುಮೋದನೆ ಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಈ ಸಂಬಂಧ ಸರ್ಕಾರದ ಪತ್ರದ ಸಂಖ್ಯೆ : ನಅಇ 216 ಎಂಎನ್‌ಯು 2011 ದಿನಾಂಕ : 10-11-2011 ರಲ್ಲಿ ಕೆಲವೊಂದು ಮಾಹಿತಿಗಳನ್ನು ಕೋರಲಾಗಿದ್ದು, ನಗರ ಪಾಲಿಕೆಯು ಸದರಿ ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲು ದಿನಾಂಕ : 25-1-2012 ರಂದು ಸರ್ಕಾರಕ್ಕೆ ಮಾಹಿತಿಗಳನ್ನು ಸಲ್ಲಿಸಲಾಗಿರುತ್ತದೆ.

ಮುಂದುವರೆದಂತೆ 2008-2009ನೇ ಸಾಲಿನಲ್ಲಿ ಜಾರಿಗೆ ತರಲಾಗಿರುವ ಪ್ರದೇಶವಾರು ಯೂನಿಟ್ ದರವು ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯು 2000 ನೇ ಸಾಲಿನಲ್ಲಿ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿ ಅಡಿಯಲ್ಲಿ ನಿಗಧಿಪಡಿಸಲಾಗಿರುವ ದರಗಳನ್ನೇ ಪ್ರಸ್ತುತ ನಿಗಧಿಪಡಿಸಲಾಗಿದ್ದು ಅಂದಿನಿಂದ ಇಂದಿನವರೆಗೂ ದರಗಳು ಪರಿಷ್ಕರಣೆ ಆಗಿರುವುದಿಲ್ಲ. ಪ್ರಸ್ತುತ ಜಾರಿಯಲ್ಲಿರುವ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯು ದಿನಾಂಕ : 31-3-2011ಕ್ಕೆ ಮೂರು ವರ್ಷಗಳ ಅವಧಿಗೆ ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಆಸ್ತಿ ತೆರಿಗೆ ದರಗಳ ಪರಿಷ್ಕರಣೆಯನ್ನು ದಿನಾಂಕ : 1-4-2011 ರಿಂದಲೇ ಜಾರಿಗೆ ತರಬೇಕಾಗಿದ್ದು, ಕಾಯ್ದೆಯಂತೆ ಶೇಕಡ 15 ರಿಂದ 30 ರವರೆಗೆ ಆಸ್ತಿ ತೆರಿಗೆ ದರವನ್ನು ಪರಿಷ್ಕರಣೆ ಮಾಡಬೇಕಾಗಿರುವುದರಿಂದ ಮತ್ತು ದಿನಾಂಕ : 1-4-2011 ರಿಂದ ಮತ್ತೆ ಕಟ್ಟಡ ಸವಕಳಿ ನೀಡಬೇಕಾಗಿರುವುದರಿಂದ ಜಾರಿಯಲ್ಲಿರುವ ದರಗಳನ್ನೇ ಪರಿಷ್ಕರಿಸಿ ದಿನಾಂಕ : 1-4-2011 ರಿಂದ ಜಾರಿಗೊಳಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಾಹನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಿದ್ದು, ದಿನಾಂಕ : 26-2-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ : 04(391) : 2012-2013 ರಲ್ಲಿ ವಲಯ ವರ್ಗೀಕರಣವನ್ನು ಮಾತ್ರ ಜಾರಿಗೊಳಿಸಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಗಿದೆ. ಸದರಿ ಕಡತವು ಕೌನ್ಸಿಲ್ ಕಾರ್ಯಾಲಯದಿಂದ ಆಯುಕ್ತರಿಗೆ ಮೇ 2013 ನೇ ಸಾಲಿನಲ್ಲಿ ಸ್ವೀಕೃತಿಗೊಂಡಿರುತ್ತದೆ. ಆದರೆ, 2013-14 ನೇ ಸಾಲಿನ ಆರ್ಥಿಕ ವರ್ಷವು ದಿನಾಂಕ: 01-04-2013 ರಿಂದ ಪ್ರಾರಂಭಗೊಂಡು ಬಹುತೇಕ ತೆರಿಗೆದಾರರು ಆಸ್ತಿ ತೆರಿಗೆಯನ್ನು ಈ ಹಿಂದೆ ಪಾವತಿಸಲಾಗುತ್ತಿದ್ದ ತೆರಿಗೆಯನ್ನೇ ಪಾವತಿಸಿದ್ದರಿಂದ ವಲಯ ವರ್ಗೀಕರಣವನ್ನು ಜಾರಿಗೊಳಿಸಲು ಸಾಧ್ಯವಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಈಗಾಗಲೇ ಎರಡನೇ ಬ್ಲಾಕ್ ಅವಧಿಯಲ್ಲಿಯೂ ಸಹ ಆಸ್ತಿ ತೆರಿಗೆ ದರಗಳ ಪರಿಷ್ಕರಣೆ ಕೈಗೊಳ್ಳದೆ ಇದ್ದು ನಗರ ಪಾಲಿಕೆ ಆರ್ಥಿಕ ಹಿತದೃಷ್ಟಿಯಿಂದ 2014-2015 ನೇ ಸಾಲಿನ ಆರ್ಥಿಕ ವರ್ಷ ಹಾಗೂ 3ನೇ ಬ್ಲಾಕ್ ಅವಧಿಯು ದಿನಾಂಕ : 1-4-2014 ರಿಂದ ಪ್ರಾರಂಭಗೊಳ್ಳುತ್ತಿರುವುದರಿಂದ ಕೆ.ಎಂ.ಸಿ ಕಾಯ್ದೆ ಹಾಗೂ ಅದರಡಿಲ್ಲಿ ರಚಿಸಲಾದ ನಿಯಮಾವಳಿಗಳಂತೆ ಕನಿಷ್ಟ ಶೇಕಡ 15 ರಷ್ಟು ಹಾಗೂ ಗರಿಷ್ಟ ಶೇಕಡ 30 ರವರೆಗೆ ಹೆಚ್ಚಳ ಮಾಡಲು ಅವಕಾಶವಿದ್ದು, ಪ್ರಸ್ತುತ ಜಾರಿಯಲ್ಲಿರುವ ದರಗಳ ಮೇಲೆ ಹೆಚ್ಚಳ ಮಾಡಬೇಕಾಗಿರುವುದರಿಂದ ಚಾಲ್ತಿಯಲ್ಲಿರುವ ಪ್ರದೇಶವಾರು ಯೂನಿಟ್ ದರಗಳ ಮೇಲೆ ಕನಿಷ್ಟ ಶೇಕಡ 15, ಗರಿಷ್ಟ 30 ರಷ್ಟು ಹೆಚ್ಚಿಸಿ ದಿನಾಂಕ :1-4-2014 ರಿಂದ ಜಾರಿಗೊಳಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಿದ್ದು, ದಿನಾಂಕ : 28-01-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ : 08(174)/2013-14 ರಲ್ಲಿ ಪ್ರಸ್ತಾವನೆಯನ್ನು ಕೈಬಿಡಲಾಗಿದೆ ಎಂದು ತೀರ್ಮಾನಿಸಿರುತ್ತಾರೆ.

ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಪತ್ರದ ಸಂಖ್ಯೆ : ನಅಇ 216 ಎಂಎನ್‌ಯು 2011 ದಿನಾಂಕ : 21-5-2013 ರಲ್ಲಿ ಆಸ್ತಿ ತೆರಿಗೆ ದರಗಳ ಪರಿಷ್ಕರಣೆಯನ್ನು 3 ವರ್ಷಗಳ ಅವಧಿಯಿಂದ 5 ವರ್ಷಗಳ ಅವಧಿಗೆ ವಿಸ್ತರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಪಾಲಿಕೆಯ ಪ್ರಸ್ತುತ ಆರ್ಥಿಕ ಸ್ಥಿತಿಯು ತೀರಾ ಕ್ಲಿಷ್ಟಕರವಾಗಿದ್ದು, ದೈನಂದಿನ ಕಾರ್ಯಗಳಿಗಾಗಿ ವಿವಿಧ ಹಣಕಾಸು ಸಂಸ್ಥೆಗಳಿಂದ

ಸಾಲವನ್ನು ಪಡೆಯಲು ಪಾಲಿಕೆಯ ಸ್ಥಿರಾಸ್ತಿಯನ್ನು ಅಡಮಾನವಿಡುವಂತಹ ಪರಿಸ್ಥಿತಿ ಒದಗಿಸಿರುವ ಹಿನ್ನಲೆಯಲ್ಲಿ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ದರಗಳ ಪರಿಷ್ಕರಣೆಯನ್ನು 3 ವರ್ಷಗಳ ಅವಧಿಯಿಂದ 5 ವರ್ಷಗಳ ಅವಧಿಗೆ ವಿಸ್ತರಿಸುವುದು ಸಮಂಜಸವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಮಹಾಲೇಖಪಾಲಕರು ಕರ್ನಾಟಕ (ಕೇಂದ್ರ ಸರ್ಕಾರ) ರವರು ಆಸ್ತಿ ತೆರಿಗೆ ದರಗಳ ಪರಿಷ್ಕರಣೆ ಮಾಡಲು ಕಾಯ್ದೆಯಲ್ಲಿ ಅವಕಾಶವಿದ್ದರೂ ಸಹ ನಗರ ಪಾಲಿಕೆಯು ಈ ಸಂಬಂಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಆಡಿಟ್ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ.

ಆದುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆ.ಎಂ.ಸಿ ಕಾಯ್ದೆ ಹಾಗೂ ಅದರಡಿಲ್ಲಿ ರಚಿಸಲಾದ ನಿಯಮಾವಳಿಗಳಂತೆ ಕನಿಷ್ಠ ಶೇಕಡ 15 ರಷ್ಟು ಹಾಗೂ ಗರಿಷ್ಠ ಶೇಕಡ 30 ರವರೆಗೆ ಹೆಚ್ಚಳ ಮಾಡಲು ಅವಕಾಶವಿದ್ದು, ಪ್ರಸ್ತುತ ಜಾರಿಯಲ್ಲಿರುವ ದರಗಳ ಮೇಲೆ ಹೆಚ್ಚಳ ಮಾಡಬೇಕಾಗಿರುವುದರಿಂದ ಚಾಲ್ತಿಯಲ್ಲಿರುವ ಪ್ರದೇಶವಾರು ಯೂನಿಟ್ ದರಗಳ ಮೇಲೆ ಕನಿಷ್ಠ ಶೇಕಡ 15, ಗರಿಷ್ಠ 30 ರಷ್ಟು ಹೆಚ್ಚಿಸಲು ಮತ್ತು ಕರ್ನಾಟಕ ಸರ್ಕಾರದ ಮುದ್ರಾಂಕ ಇಲಾಖೆಯು ದಿನಾಂಕ ಃ 8-10-2013 ರಂದು ಪ್ರಚುರಪಡಿಸಲಾಗಿರುವ ಸ್ಥಿರಾಸ್ತಿಗಳ ಮಾರ್ಗಸೂಚಿ ದರವನ್ನು ಅನುಸರಿಸಿ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಲಯ ವರ್ಗೀಕರಣವನ್ನು ದಿನಾಂಕ ಃ 1-4-2015 ರಿಂದ ಜಾರಿಗೊಳಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಾಹನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ದಿನಾಂಕ ಃ 11-8-2014 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ವಿಷಯದ ಸಂಖ್ಯೆ ಃ ತೆಆಸ್ಥಾಸ ಃ 22 ಃ 2014-2015 ರಲ್ಲಿ ಪ್ರಸ್ತುತ ಜಾರಿಯಲ್ಲಿರುವ ದರಗಳನ್ವಯ ವಸತಿ ಸ್ವತ್ತುಗಳಿಗೆ ಶೇಕಡ 20 ಹಾಗೂ ವಸತಿಯೇತರ ಸ್ವತ್ತುಗಳಿಗೆ ಶೇಕಡ 25 ರಷ್ಟು ಯೂನಿಟ್ ದರಗಳನ್ನು ಹೆಚ್ಚಿಸುವ ಮಾರ್ಪಾಡಿನೊಂದಿಗೆ ಆಯುಕ್ತರ ದಿನಾಂಕ ಃ 15-07-2014ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಗಿದೆ. ದಿನಾಂಕ : 28-01-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕ ಸಭೆಯ ವಿಷಯದ ಸಂಖ್ಯೆ ಃ 05(174)/2014-15 ರಲ್ಲಿ ಪ್ರಸ್ತಾವನೆಯ ಬಗ್ಗೆ ಪುನರ್ ಪರಿಶೀಲಿಸಿ, ಸಭೆಯ ಮುಂದೆ ಮಂಡಿಸಲು ಕಡತವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ಸಭೆಯು ತೀರ್ಮಾನಿಸಲಾಗಿದೆ.

ಮೇಲಿನ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆ.ಎಂ.ಸಿ ಕಾಯ್ದೆ ಹಾಗೂ ಅದರಡಿಯಲ್ಲಿ ರಚಿಸಲಾಗಿರುವ ನಿಯಮಾವಳಿಗಳಂತೆ ಕನಿಷ್ಠ ಶೇಕಡ 15 ರಷ್ಟು ಹಾಗೂ ಗರಿಷ್ಠ ಶೇ.30 ರರವರೆಗೆ ಹೆಚ್ಚಳ ಮಾಡಲು ಅವಕಾಶವಿದ್ದು, ಪ್ರಸ್ತುತ ಜಾರಿಯಲ್ಲಿರುವ ದರಗಳ ಮೇಲೆ ಹೆಚ್ಚಳ ಮಾಡಬೇಕಾಗಿರುವುದರಿಂದ ಚಾಲ್ತಿಯಲ್ಲಿರುವ ಪ್ರದೇಶವಾರು ಯೂನಿಟ್ ದರಗಳ ಮೇಲೆ ಕನಿಷ್ಠ ಶೇಕಡ 15, ಗರಿಷ್ಠ 30 ರಷ್ಟು ಹೆಚ್ಚಿಸಲು ಹಾಗೂ ಕರ್ನಾಟಕ ಮುದ್ರಾಂಕ ಇಲಾಖೆಯು ದಿನಾಂಕ : 27-10-2014 ರಂದು ಪ್ರಚುರಪಡಿಸಲಾಗಿರುವ ಸ್ಥಿರಾಸ್ತಿಯ ಮಾರ್ಗಸೂಚಿ ದರವನ್ನು ಅನುಸರಿಸಿ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಲಯ ವರ್ಗೀಕರಣವನ್ನು ಜಾರಿಗೊಳಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿರುತ್ತದೆ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ : 25-08-2015 ರ ವಿಷಯದ ಸಂಖ್ಯೆ : 168/2015 ರ ನಡವಳಿಗಳಲ್ಲಿ ದಿನಾಂಕ : 11-08-2014 ರ ಹಿಂದಿನ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ನಿರ್ಣಯದಂತೆ ಯೂನಿಟ್ ದರಗಳನ್ನು ದಿನಾಂಕ : 01-04-2016 ರಿಂದ (2016-17) ಹೆಚ್ಚಿಸಲು ಅನುಮೋದಿಸಿರುತ್ತಾರೆ. ಹಾಗೂ ದಿನಾಂಕ ಃ 25-08-2015 ರ ವಿಷಯದ ಸಂಖ್ಯೆ : 169/2015 ರ ನಡವಳಿಗಳಲ್ಲಿ ವಲಯ ವರ್ಗೀಕರಣವನ್ನು ಒಂದು ವಲಯ ಹೆಚ್ಚಳಕ್ಕೆ ಸೀಮಿತಗೊಳಿಸಿ, 2016-17 ನೇ ಸಾಲಿಗೆ ದಿನಾಂಕ : 01-04-2016 ರಿಂದ ಜಾರಿಗೊಳಿಸಲು ಅನುಮೋದಿಸಿರುತ್ತಾರೆ.

ಮಾನ್ಯ ಆಡಳಿತಗಾರರ ನಿರ್ಣಯದಂತೆ, ವಸತಿ ಸ್ವತ್ತುಗಳಿಗೆ ಶೇ.20 ರಷ್ಟು ಹಾಗೂ ವಸತಿಯೇತರ ಸ್ವತ್ತುಗಳಿಗೆ ಶೇ.25 ರಷ್ಟು ಹಾಗೂ ವಲಯ ವರ್ಗೀಕರಣವನ್ನು ಪರಿಷ್ಕರಿಸಿ, ಮಾನ್ಯ ಆಯುಕ್ತರು ದಿನಾಂಕ : 08-09-2015 ರಂದು ಈ ಸಂಬಂಧ ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಸದರಿ ಕರಡು ಅಧಿಸೂಚನೆಯನ್ನು ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ನಾಮಾಂಕಿತದಲ್ಲಿ ದಿನಾಂಕ : 19-10-2015 ರಂದು ಕರ್ನಾಟಕ ರಾಜ್ಯಪತ್ರ, ಅಧಿಕೃತವಾಗಿ ಪ್ರಕಟಿಸಲಾಗಿರುವ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ಕರಡು ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಆಕ್ಷೇಪಣೆ / ಸಲಹೆಗಳನ್ನು ಸಲ್ಲಿಸಲು ಸಾರ್ವಜನಿಕರಿಗೆ / ತೆರಿಗೆದಾರರಿಗೆ ಅವಕಾಶ ಕಲ್ಪಿಸಲಾಗಿರುತ್ತದೆ.

ಕರಡು ಅಧಿಸೂಚನೆಯಲ್ಲಿನ ವಿವರಗಳ ಕುರಿತು ಸಾರ್ವಜನಿಕರು / ತೆರಿಗೆದಾರರು ಸಲ್ಲಿಸಲಾದ ಆಕ್ಷೇಪಣೆ / ಸಲಹೆಗಳನ್ನು ತುಲನಾತ್ಮಕವಾಗಿ ಪರಿಶೀಲನೆ ನಡೆಸಿ ಅಂತಿಮ ಅಧಿಸೂಚನೆ ಹೊರಡಿಸುವ ಬಗ್ಗೆ ಸೂಕ್ತ ವರದಿಯನ್ನು ಸಿದ್ಧಪಡಿಸಲು ದಿನಾಂಕ : 05-11-2015 ರಂದು ವಿಶೇಷ ಆಯುಕ್ತೆ (ಕಲ್ಯಾಣ) ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯು ಆಕ್ಷೇಪಣೆ ಅವಧಿಯಲ್ಲಿ ಸಲ್ಲಿಸಲಾಗಿರುವ ಆಕ್ಷೇಪಣೆಗಳನ್ನು ತುಲನಾತ್ಮಕವಾಗಿ ಪರಿಶೀಲಿಸಲು ದಿನಾಂಕ : 25-11-2015, 14-12-2015 ಮತ್ತು 03-02-2016 ರಂದು ಸಭೆಗಳನ್ನು ನಡೆಸಿ, ಕರಡು ಅಧಿಸೂಚನೆಯ ವರ್ಗ ಗಿಖ ಕ್ಕೆ ಸಂಬಂಧಿಸಿದಂತೆ, ಪ್ರದೇಶವಾರು ಯೂನಿಟ್ ದರಗಳು ಈ ಹಿಂದೆ ನಿಗಧಿಪಡಿಸಲಾಗಿರುವ ದರಗಳೇ ಮುಂದುವರೆದಿರುತ್ತದೆ. ಆದರೆ, ವಸತಿಯೇತರ ಸ್ವತ್ತುಗಳಿಗೆ ಪ್ರಸ್ತುತ ಇರುವ ದರಗಳ ಮೇಲೆ ಶೇ.25 ರಷ್ಟು ಹೆಚ್ಚುವರಿ ಆಗಿ ನಿಗಧಿಪಡಿಸಲು ದಿನಾಂಕ : 25-08-2015 ರ ಮಾನ್ಯ ಆಡಳಿತಗಾರರ ವಿಷಯ ಸಂಖ್ಯೆ :168/2015-16 ರ ಸಭೆಯಲ್ಲಿ ತೀರ್ಮಾನಿಸಿರುವುದರಿಂದ ಪ್ರಸ್ತುತ ಇರುವ ದರಗಳ ಮೇಲೆ ಶೇ.25 ರಷ್ಟು ದರಗಳನ್ನು ಸೇರ್ಪಡಿಸಿ, ನಿಗಧಿಪಡಿಸಲು ಹಾಗೂ ಕರಡು ಅಧಿಸೂಚನೆಯಲ್ಲಿ ಹೊರಡಿಸಿರುವಂತೆ ಪ್ರದೇಶವಾರು ಯೂನಿಟ್ ದರ ಹಾಗೂ ವಲಯ ವರ್ಗೀಕರಣವನ್ನು ಅಂತಿಮ ಅಧಿಸೂಚನೆಯಲ್ಲಿ ಪ್ರಚುರಪಡಿಸಬಹುದಾಗಿರುತ್ತದೆಂದು ಸಮಿತಿಯು ಅಭಿಪ್ರಾಯಿಸಿ, ದಿನಾಂಕ : 09-02-2016 ರಂದು ವರದಿಯನ್ನು ಮಂಡಿಸಿರುತ್ತದೆ.

ಈ ಹಿಂದಿನ ವರ್ಷಗಳು ಮತ್ತು 2008-09 ನೇ ಸಾಲಿನಿಂದ 2015-16 ನೇ ಸಾಲಿನ ಬ್ಲಾಕ್ ಅವಧಿಯಲ್ಲಿ ಬೇ-ಬಾಕಿ ಉಳಿಸಿಕೊಂಡಿರುವ ಆಸ್ತಿತೆರಿಗೆಯನ್ನು ಮುಂಬರುವ ಬ್ಲಾಕ್ ಅವಧಿಯಲ್ಲಿ ವಸೂಲಾತಿ ಮಾಡಬಹುದಾಗಿದೆ. ಈ ಸಂಬಂಧ ಬೇ-ಬಾಕಿ ಉಳಿಸಿಕೊಂಡಿರುವ ಆಸ್ತಿತೆರಿಗೆಯನ್ನು ಈ ಹಿಂದಿನ ಬ್ಲಾಕ್ ಅವಧಿಯಲ್ಲಿದ್ದ ತೆರಿಗೆ ದರ ಮತ್ತು ವಲಯ ವರ್ಗೀಕರಣದಂತೆ ಕ್ರಮ ಕೈಗೊಳ್ಳಬಹುದಾಗಿದೆ.

ಈ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅವಗಾಹನೆಗಾಗಿ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ದಿನಾಂಕ : 27-02-2016 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ವಿಷಯದ ಸಂಖ್ಯೆ : ತೆಆಸ್ಥಾ / 62/2015-16 ರಲ್ಲಿ ಆಯುಕ್ತರ ದಿನಾಂಕ : 27-02-2016 ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಲಾಗಿದೆ.

ಮೇಲಿನ ಹಿನ್ನಲೆಯಲ್ಲಿ 2016-17 ನೇ ಸಾಲಿಗೆ ವಲಯ ವರ್ಗೀಕರಣ ಹಾಗೂ ಪ್ರದೇಶವಾರು ಯೂನಿಟ್ ದರಗಳನ್ನು ಪರಿಷ್ಕರಿಸಿ ಜಾರಿಗೊಳಿಸುವಲ್ಲಿ ಕೆ.ಎಂ.ಸಿ ಕಾಯ್ದೆ 1976 ಪ್ರಕರಣ 108ಎ (16)(17) ರಂತೆ ನಿರ್ಧರಿಸಿ ಮಾನ್ಯ ಆಯುಕ್ತರು ದಿನಾಂಕ : 09-03-2016 ರಂದು ಅಂತಿಮವಾಗಿ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಸದರಿ ಅಂತಿಮ ಅಧಿಸೂಚನೆಯನ್ನು ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ನಾಮಾಂಕಿತದಲ್ಲಿ ದಿನಾಂಕ : 16-03-2016 ರಂದು ಕರ್ನಾಟಕ ರಾಜ್ಯ ಪತ್ರ, ಅಧಿಕೃತವಾಗಿ ಪ್ರಕಟಿಸಲಾಗಿರುವ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಪ್ರಕಟಿಸಿ ದಿನಾಂಕ : 01-04-2016 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿರುತ್ತದೆ.

ಸದರಿ ಪರಿಷ್ಕರಣೆಯಂತೆ ತೆರಿಗೆದಾರರು ಆಸ್ತಿತೆರಿಗೆ ಲೆಕ್ಕಚಾರ ಮಾಡಿ ಆಸ್ತಿತೆರಿಗೆ ಘೋಷಿಸಿಕೊಂಡು ಪಾವತಿಸಿರುತ್ತಾರೆ. ಹಲವಾರು ಪ್ರಕರಣಗಳಲ್ಲಿ ಹಿಂದಿನ ಬ್ಲಾಕ್ ಅವಧಿಗೆ ಹೋಲಿಸಿದ್ದಲ್ಲಿ 2016-17 ಸಾಲಿನಲ್ಲಿ ಪಾವತಿಸಿರುವ ಆಸ್ತಿತೆರಿಗೆ ಮೊತ್ತವು ಹಿಂದಿನ ಬ್ಲಾಕ್ ಅವಧಿಯ ಆಸ್ತಿತೆರಿಗೆ ಮೊತ್ತಕ್ಕಿಂತ ವಸತಿಗೆ ಶೇ.20 ಮತ್ತು ವಸತಿಯೇತರ ಸ್ವತ್ತುಗಳಿಗೆ ಶೇ.25 ಕ್ಕಿಂತ ಹೆಚ್ಚುವರಿ ಆಗಿ ಆಸ್ತಿತೆರಿಗೆ ಪಾವತಿ ಆಗಿರುವುದು ಕಂಡುಬಂದಿರುತ್ತದೆ.

ಆದುದರಿಂದ ದಿನಾಂಕ: 29-04-2016 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ "2016-17 ನೇ ಸಾಲಿನಲ್ಲಿ ಪ್ರದೇಶವಾರು ಯೂನಿಟ್ ದರ ಹಾಗೂ ವಲಯ ವರ್ಗೀಕರಣದಂತೆ ಆಸ್ತಿತೆರಿಗೆಯನ್ನು ಲೆಕ್ಕಚಾರ ಮಾಡಿ, ನಂತರ ಲೆಕ್ಕಚಾರ ಮಾಡುವಾಗ ಈ ಹಿಂದಿನ ಸಾಲುಗಳಲ್ಲಿ ಪಾವತಿಸಲಾಗಿರುವ ಆಸ್ತಿತೆರಿಗೆಯ ಮೊತ್ತಕ್ಕಿಂತ ಹೆಚ್ಚುವರಿ ಮೊತ್ತವು ಲೆಕ್ಕಾಚಾರವಾಗಿದಲ್ಲಿ, ಹೆಚ್ಚುವರಿಯಾದ ಮೊತ್ತಕ್ಕೆ ವಸತಿಗೆ ಶೇ.20 ಮತ್ತು ಇತರೆ ಉಪಕರಗಳು ಹಾಗೂ ವಸತಿಯೇತರಕ್ಕೆ ಶೇ.25 ರಷ್ಟು ತೆರಿಗೆ ಮತ್ತು ಇತರೆ ಉಪಕರಗಳನ್ನು ಸೇರಿಸಿ ಆಸ್ತಿತೆರಿಗೆಯನ್ನು ಮಿತಿಗೊಳಿಸಿ ಆಸ್ತಿತೆರಿಗೆ ಸ್ವೀಕರಿಸತಕ್ಕದೆಂದು ನಿರ್ಣಯಿಸಲಾಗಿರುತ್ತದೆ.

ನಗರ ಪಾಲಿಕೆಯ ನಿರ್ಣಯದಂತೆ ಆಸ್ತಿತೆರಿಗೆ ತಂತ್ರಾಂಶದಲ್ಲಿ ಅಳವಡಿಸಿದ ನಂತರ, ಸ್ವತ್ತಿನ ಉಪಯೋಗದಲ್ಲಿ ಬದಲಾವಣೆ, ವಲಯ ವರ್ಗೀಕರಣ ಮತ್ತು ಸ್ವತ್ತಿನ ವಿಸ್ತೀರ್ಣದಲ್ಲಿ ಬದಲಾವಣೆ ಇರುವ ಪ್ರಕರಣಗಳಲ್ಲಿ ಆಸ್ತಿತೆರಿಗೆ ಲೆಕ್ಕಾಚಾರ ಮಾಡಿದಾಗ ಹಿಂದಿನ ಸಾಲಿನ ತೆರಿಗೆಗೆ ಶೇ.20 ಮತ್ತು ಶೇ.25 ರಷ್ಟು ಮಿತಿಗೊಂಡು ತೆರಿಗೆ ಲೆಕ್ಕಾಚಾರವಾಗಿರುವುದು ಕಂಡುಬಂದಿರುತ್ತದೆ.

ಮುಂದುವರೆದಂತೆ, ಇಂತಹ ಪ್ರಕರಣಗಳಲ್ಲಿ ಕೈಗೊಳ್ಳಬೇಕಾದ ಮಾರ್ಗಸೂಚಿ ಬಗ್ಗೆ ದಿನಾಂಕ: 31-05-2016ರ ನಗರ ಪಾಲಿಕೆ ಸಭೆಯಲ್ಲಿ ಈ ಕೆಳಕಂಡಂತೆ, ತೀರ್ಮಾನ ಕೈಗೊಳ್ಳಲಾಗಿರುತ್ತದೆ.

"ಹೊಸದಾಗಿ ಕಟ್ಟಡ ನಿರ್ಮಾಣವಾಗಿರುವ ಪ್ರಕರಣಗಳಲ್ಲಿ ಹಾಗೂ ಸ್ವತ್ತಿನ ಉಪಯೋಗದಲ್ಲಿ ಬದಲಾವಣೆ ಆಗಿರುವ ಪ್ರಕರಣಗಳಲ್ಲಿ ಈ ಹಿಂದಿನ ಪ್ರದೇಶವಾರು ಯೂನಿಟ್ ದರ ಹಾಗೂ ವಲಯ ವರ್ಗೀಕರಣದಂತೆ (2008-16) ಮತ್ತು ಪ್ರಸ್ತುತ ಸಾಲಿನ ಪ್ರದೇಶವಾರು ಯೂನಿಟ್ ದರ ಹಾಗೂ ವಲಯ ವರ್ಗೀಕರಣದಂತೆ (2016) ತಂತ್ರಾಂಶದಲ್ಲಿ ಲೆಕ್ಕಾಚಾರ ಮಾಡಿರುವ ಆಸ್ತಿತೆರಿಗೆ ಮೊತ್ತವನ್ನು ತಾಳೆ ಮಾಡಿ ವಸತಿಗೆ ಶೇ. 20 ರಷ್ಟು ಹಾಗೂ ವಸತಿಯೇತರ ಸ್ವತ್ತಗಳಿಗೆ ಶೇ.25 ರಷ್ಟು ಹಾಗೂ ಇತರೆ ಉಪಕರಗಳನ್ನು ಸೇರಿಸಿ ಆಸ್ತಿತೆರಿಗೆ ಮಿತಿಗೊಳಿಸಿ ಸ್ವೀಕರಿಸುವುದೆಂದು ನಿರ್ಣಯಿಸಲಾಗಿರುತ್ತದೆ. ಸದರಿ ನಿರ್ಣಯದಂತೆ ಕ್ರಮ ಕೈಗೊಂಡು ಜಾರಿಗೊಳಿಸಲಾಗಿರುತ್ತದೆ.

ಮುಂದುವರೆದಂತೆ, ಪ್ರಸ್ತುತ ಬ್ಲಾಕ್ ಅವಧಿಯು ದಿನಾಂಕ:01-04-2016 ರಿಂದ ಪ್ರಾರಂಭಗೊಂಡು ದಿನಾಂಕ:31-03-2019 ರ ಅಂತ್ಯಕ್ಕೆ ಮೂರು ವರ್ಷಗಳ ಅವಧಿಗೆ ಮುಕ್ತಾಯಗೊಳ್ಳಲಿರುವ ಹಿನ್ನಲೆಯಲ್ಲಿ ಕಾಯ್ದೆ ಅನ್ವಯ ಪ್ರತಿ ಮೂರು ವರ್ಷಗಳಿಗೊಮ್ಮೆ ಕನಿಷ್ಟ ಶೇ.15 ರಷ್ಟು ಹಾಗೂ ಗರಿಷ್ಟ ಶೇ.30 ರಷ್ಟು ಆಸ್ತಿತೆರಿಗೆ ಪ್ರದೇಶವಾರು ಯೂನಿಟ್ ದರಗಳನ್ನು ಪರಿಷ್ಕರಣೆ ಮಾಡಲು ಅವಕಾಶವಿರುತ್ತದೆ. ಹಾಗೂ ಸಿಎಜಿ ರವರ ಆಡಿಟ್ ಆಕ್ಷೇಪಣೆಯಲ್ಲಿ ಕಾಯ್ದೆ ಅನ್ವಯ ಪ್ರದೇಶವಾರು ಯೂನಿಟ್ ದರಗಳನ್ನು ಪರಿಷ್ಕರಣೆ ಮಾಡಲು ಅವಕಾಶವಿದ್ದರೂ ಸಹ ನಗರ ಪಾಲಿಕೆಯು ಈ ಸಂಬಂಧ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುತ್ತಿರುವುದು ಕಂಡುಬಂದಿದ್ದು, ನಗರ ಪಾಲಿಕೆಯು ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳಿಗೆ ಆರ್ಥಿಕ ನೆರವು ನೀಡಲು ಕಷ್ಟಸಾಧ್ಯವಾಗಿರುವುದರಿಂದ ಸಾರ್ವಜನಿಕರಿಗೆ ಅಗತ್ಯ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮೇಲಿನ ಹಿನ್ನಲೆಯಲ್ಲಿ 2019-2020ನೇ ಸಾಲಿನ ಆರ್ಥಿಕ ವರ್ಷವು ದಿನಾಂಕ:01-04-2019 ರಿಂದ ಪ್ರಾರಂಭಗೊಳ್ಳಲಿದ್ದು, 2019-2020 ನೇ ಸಾಲಿಗೆ ಪ್ರದೇಶವಾರು ಯೂನಿಟ್ ದರಗಳನ್ನು ಮಾತ್ರ ಚಾಲ್ತಿಯಲ್ಲಿರುವ ಪ್ರದೇಶವಾರು ಯೂನಿಟ್ ದರಗಳ ಮೇಲೆ ವಸತಿಗೆ ಶೇ.25 ಮತ್ತು ವಸತಿಯೇತರ ಸ್ವತ್ತುಗಳಿಗೆ ಶೇ.30 ರಷ್ಟು ಹೆಚ್ಚಿಸಿ ಪರಿಷ್ಕರಣೆ ಮಾಡುವುದು ಸೂಕ್ತ ಹಾಗೂ ಸಮಂಜಸವಾಗಿರುವುದರಿಂದ ಸದರಿ ಪ್ರಸ್ತಾವನೆ ಬಗ್ಗೆ ಸೂಕ್ತ

ತೀರ್ಮಾನ ಕೈಗೊಳ್ಳುವಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿ ಮಂಡಿಸಲಾಗಿತ್ತು. ದಿನಾಂಕ:13-02-2019 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ವಿಷಯದ ಸಂಖ್ಯೆ:ತೆಆಸ್ಥಾಸ/ 90 / 2018-19 ರಲ್ಲಿ ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಗಿರುತ್ತದೆ.

"ಯೂನಿಟ್ ದರಗಳ ಮೇಲೆ ವಸತಿ ಸ್ವತ್ತುಗಳಿಗೆ ಶೇ.25 ಮತ್ತು ವಸತಿಯೇತರ ಸ್ವತ್ತುಗಳಿಗೆ ಶೇ.30 ರಷ್ಟು ಆಸ್ತಿತೆರಿಗೆ ಹೆಚ್ಚಳ ಮಾಡುವುದರಿಂದ ನಗರ ಪಾಲಿಕೆ ಬೊಕ್ಕಸಕ್ಕೆ ಎಷ್ಟು ಆದಾಯ ಕ್ರೋಢೀಕರಣವಾಗುತ್ತದೆಂಬ ಬಗ್ಗೆ ವಿವರವಾದ ವರದಿಯನ್ನು ಮಂಡಿಸುವಂತೆ ತೀರ್ಮಾನಿಸಲಾಗಿರುತ್ತದೆ."

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರದೇಶವಾರು ಯೂನಿಟ್ ದರಗಳ ಮೇಲೆ ಆಸ್ತಿತೆರಿಗೆ ಪರಿಷ್ಕರಿಸಿದ್ದಲ್ಲಿ ವಸತಿ ಸ್ವತ್ತುಗಳಿಂದ ಅಂದಾಜು ರೂ.345.50 ಕೋಟಿಗಳು ಮತ್ತು ವಸತಿಯೇತರ ಸ್ವತ್ತುಗಳಿಂದ ಅಂದಾಜು ರೂ.328.51 ಕೋಟಿಗಳು ಒಟ್ಟಾರೆಯಾಗಿ ರೂ.671.95 ಕೋಟಿಗಳಷ್ಟು ಹೆಚ್ಚುವರಿ ಆಸ್ತಿತೆರಿಗೆ ನಿರೀಕ್ಷಿಸಬಹುದಾಗಿದೆ.

ಮೇಲಿನ ಹಿನ್ನಲೆಯಲ್ಲಿ 2019-2020 ನೇ ಸಾಲಿಗೆ ಪ್ರದೇಶವಾರು ಯೂನಿಟ್ ದರಗಳನ್ನು ಮಾತ್ರ ಚಾಲ್ತಿಯಲ್ಲಿರುವ ಪ್ರದೇಶವಾರು ಯೂನಿಟ್ ದರಗಳ ಮೇಲೆ ವಸತಿಗೆ ಶೇ.25 ಮತ್ತು ವಸತಿಯೇತರ ಸ್ವತ್ತುಗಳಿಗೆ ಶೇ.30 ರಷ್ಟು ಹೆಚ್ಚಿಸಿ ಪರಿಷ್ಕರಣೆ ಮಾಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುವಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ದಿನಾಂಕ : 08-03-2019 ರಂದು ಟಿಪ್ಪಣಿ ಮಂಡಿಸಲಾಗಿರುತ್ತದೆ.

ಈ ಸಂಬಂಧ ದಿನಾಂಕ : 21-06-2019 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ವಿಷಯದ ಸಂಖ್ಯೆ : ತೆಆಸ್ಥಾಸ/08/2018-19 ರಲ್ಲಿ ತೆರಿಗೆ ಹೆಚ್ಚಿಸುವುದರ ಬದಲು, ಆಸ್ತಿತೆರಿಗೆ ಜಾಲದಲ್ಲಿ ಬಿಟ್ಟು ಹೋಗಿರುವ ಆಸ್ತಿಗಳನ್ನು ತೆರಿಗೆ ಜಾಲಕ್ಕೆ ಒಳಪಡಿಸಲು ಹಾಗೂ ಬಾಕಿ ಆಸ್ತಿತೆರಿಗೆ ರೂ.2000 ಕೋಟಿ ವಸೂಲಾತಿಗೆ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿರುತ್ತದೆ.

ದಿನಾಂಕ:19-07-2019 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಭೆಯಲ್ಲಿ ಈ ಕೆಳಕಂಡಂತೆ ಏಕಪಕ್ಷೀಯವಾಗಿ ನಿರ್ಣಯ ಕೈಗೊಳ್ಳಲಾಗಿರುತ್ತದೆ.

"ಕರ್ನಾಟಕ ಪೌರ ನಿಗಮನಗಳ ಕಾಯ್ದೆ 1976ರ ಕಲಂ 108 (ಎ)(16)(2) ರ ಅನುಸಾರ ಪ್ರದೇಶವಾರು ಯೂನಿಟ್ ದರಗಳ ಆಧಾರದ ಮೇಲೆ ಸ್ವಯಂ ಘೋಷಣಾ ಆಸ್ತಿತೆರಿಗೆ ಪದ್ಧತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ದಿನಾಂಕ:01-04-2008 ರಿಂದ ಜಾರಿಗೆ ತರಲಾಗಿದ್ದು, ಆಸ್ತಿತೆರಿಗೆ ಪರಿಷ್ಕರಣೆಯನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಕನಿಷ್ಠ ಶೇ.15 ಮತ್ತು ಗರಿಷ್ಠ ಶೇ.30 ರವರೆಗೆ ಪರಿಷ್ಕರಣೆಯನ್ನು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ರಾಜ್ಯದಲ್ಲಿನ ಹಲವಾರು ಸ್ಥಳೀಯ ಸಂಸ್ಥೆಗಳು ಕೆ.ಎಂ.ಸಿ ಕಾಯ್ದೆ ಅನುಸಾರ, ಪ್ರತಿ ಮೂರು ವರ್ಷಕ್ಕೊಮ್ಮೆ ಆಸ್ತಿ ತೆರಿಗೆಯನ್ನು ಸ್ವಯಂ ಚಾಲಿತವಾಗಿ ಪರಿಷ್ಕರಣೆ ಮಾಡಿ, ಆಸ್ತಿತೆರಿಗೆಯನ್ನು ವಿಧಿಸಿ ಸಂಗ್ರಹಿಸುತ್ತಿರುವುದು ತಿಳಿದುಬಂದಿರುತ್ತದೆ.

ಮುಂದುವರೆದಂತೆ, ಪ್ರಸ್ತುತ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಾಲಕಾಲಕ್ಕೆ ಒದಗಿಸುವ ಸಲುವಾಗಿ ಪಾಲಿಕೆಗೆ ಉಂಟಾಗುತ್ತಿರುವ ಆರ್ಥಿಕ ನಷ್ಟವನ್ನು ತಪ್ಪಿಸಲು ಕಂಪ್ಟ್ರೋಲರ್ ಅಂಡ್ ಆಡಿಟ್ ಜನರಲ್ ರವರು ಲೆಕ್ಕಪರಿಶೋಧನೆಯಲ್ಲಿ ವ್ಯಕ್ತಪಡಿಸಿರುವ

ಆಕ್ಷೇಪಣೆಯನ್ನು ಅವಗಾಹಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಪ್ರದೇಶವಾರು ಯೂನಿಟ್ ದರಗಳನ್ನು ಪರಿಷ್ಕರಿಸಿ, ಕೆ.ಎಂ.ಸಿ ಕಾಯ್ದೆ ಅನ್ವಯ ಪ್ರತಿ ಮೂರು ವರ್ಷಗಳಿಗೊಮ್ಮೆ ಆಸ್ತಿತೆರಿಗೆ ದರಗಳನ್ನು ಪರಿಷ್ಕರಿಸಿ ಸ್ವಯಂಚಾಲಿತವಾಗಿ ಜಾರಿಗೆ ತರಲು ಆಯುಕ್ತರು ಕ್ರಮವಹಿಸುವುದೆಂದು ಸಮಿತಿಯು ಏಕಪಕ್ಷೀಯವಾಗಿ ತೀರ್ಮಾನಿಸಲಾಗಿರುತ್ತದೆ.

ಈ ಸಂಬಂಧ ದಿನಾಂಕ : 31-08-2019 ರಂದು ನಡೆದ ನಗರ ಪಾಲಿಕೆ ಸಭೆಯ ವಿಷಯ ಸಂಖ್ಯೆ : 05(440)/2019-20 ರಲ್ಲಿ "ಮೊದಲ ಪರಿಷ್ಕರಣೆಗೆ ಮಾತ್ರ ಸೀಮಿತಗೊಳಿಸುವುದೆಂಬ ಮಾರ್ಪಾಡಿನೊಂದಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ : 19-07-2019 ರ ಸ್ವ-ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಗಿರುತ್ತದೆ".

ಮುಂದುವರೆದಂತೆ, ಕೆ.ಎಂ.ಸಿ ಕಾಯ್ದೆ ಕಲಂ 108(ಎ)(3)(16) ರ ಅನುಸಾರ ಪ್ರತಿ ಮೂರು ವರ್ಷಗಳಿಗೊಮ್ಮೆ ಕನಿಷ್ಠ ಶೇ.15 ರಷ್ಟು ಹಾಗೂ ಗರಿಷ್ಠ ಶೇ. 30 ರಷ್ಟು ಪ್ರದೇಶವಾರು ಯೂನಿಟ್ ದರಗಳನ್ನು ಪರಿಷ್ಕರಣೆ ಮಾಡಲು ಅವಕಾಶವಿರುತ್ತದೆ. ಆದರೆ, ದಿನಾಂಕ : 31-08-2019 ರಂದು ನಡೆದ ನಗರ ಪಾಲಿಕೆ ಸಭೆಯಲ್ಲಿ ಶೇಕಡವಾರು ಎಷ್ಟು ಆಸ್ತಿತೆರಿಗೆ ದರಗಳನ್ನು ಪರಿಷ್ಕರಣೆ ಮಾಡಬೇಕಾಗಿರುತ್ತದೆ ಎಂಬುದರ ಬಗ್ಗೆ ನಿರ್ಣಯ ಕೈಗೊಂಡಿರುವುದಿಲ್ಲ.

ಮೇಲಿನ ಹಿನ್ನಲೆಯಲ್ಲಿ ದಿನಾಂಕ : 31-08-2019 ರಂದು ನಡೆದ ನಗರ ಪಾಲಿಕೆ ಸಭೆಯಲ್ಲಿ ಶೇಕಡವಾರು ಎಷ್ಟು ಆಸ್ತಿತೆರಿಗೆ ದರಗಳನ್ನು ಪರಿಷ್ಕರಣೆ ಮಾಡುವಲ್ಲಿ ನಿರ್ದಿಷ್ಟವಾದ ತೀರ್ಮಾನ ಕೈಗೊಳ್ಳದೇ ಇರುವುದರಿಂದ ಪ್ರಸ್ತುತ 2016-17 ನೇ ಸಾಲಿನಿಂದ ಚಾಲ್ತಿಯಲ್ಲಿರುವ ದರಗಳ ಮೇಲೆ ವಸತಿ ಸ್ವತ್ತುಗಳಿಗೆ ಶೇ.25 ರಷ್ಟು ಮತ್ತು ವಸತಿಯೇತರ ಸ್ವತ್ತುಗಳಿಗೆ ಶೇ.30 ರಷ್ಟು ಪ್ರದೇಶವಾರು ಯೂನಿಟ್ ದರ ಹಾಗೂ ವಲಯ ವರ್ಗೀಕರಣವನ್ನು ಪರಿಷ್ಕರಣೆ ಮಾಡುವಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರವರ ದಿನಾಂಕ 19-02-2020ರ ಟಿಪ್ಪಣಿ.

ತೀರ್ಮಾನ: **ವಿಶೇಷ ಆಯುಕ್ತರು (ಕಂದಾಯ) ಮತ್ತು ಜಂಟಿ ಆಯುಕ್ತರು (ಕಂದಾಯ) ರವರೊಂದಿಗೆ ಚರ್ಚಿಸಲಾಯಿತು. ಗೈಡೆನ್ಸ್ ವ್ಯಾಲ್ಯೂ ಆಧಾರದ ಮೇಲೆ ವಲಯವಾರು ಮರು ವರ್ಗೀಕರಣ (ಯೂನಿಟ್ ದರದಂತೆ) ಮಾಡಲು ಪ್ರಸ್ತಾಪಿಸಿದ್ದು, ಪಾಲಿಕೆಯಲ್ಲಿರುವ ಈಗಿನ ವಲಯ ವರ್ಗೀಕರಣ ಹಾಗೂ ಮಾಡಬಹುದಾದ ವಲಯ ವರ್ಗೀಕರಣ ಹಾಗೂ ಸಂಭಾವ್ಯ ಹೆಚ್ಚುವರಿ ಆಸ್ತಿ ತೆರಿಗೆ ಆದಾಯದ ಕುರಿತು ವಲಯವಾರು ಹೋಲಿಕೆ ಮಾಡಿ ಸಮಗ್ರ ವಿವರಗಳನ್ನೊಳಗೊಂಡ ಪೂರಕ ಟಿಪ್ಪಣಿಯನ್ನು 07 ದಿನಗಳ ಒಳಗಾಗಿ ಆಯುಕ್ತರ ಮುಖಾಂತರ ಸಲ್ಲಿಸಲು ಸೂಚಿಸಲಾಯಿತು.**

(ಗೌರವ ಗುಪ್ತ)
ಆಡಳಿತಗಾರರು